| | | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1 KAN 68 | 05 ನಿ | ಕನ್ನಡ<br>ಪದ ಓದು ಅಕ್ಷರ ಕಲಿ ಹಂತ – 5 (ಎ, ಏ, ಇ, ಆ, ತ, ಳ) | * ವರ್ಣಮಾಲೆಯ ಸರಳ ಅಕ್ಷರಗಳನ್ನು ಒಟ್ಟಾಗಿ ಮತ್ತು ಬಿಡಿಯಾಗಿ ಗುರುತಿಸುವುದು.<br>* ಅಚ್ಚಾದ ದಪ್ಪ ಅಕ್ಷರಗಳನ್ನು ಕಪ್ಪು ಹಲಗೆ ಹಾಗೂ ಮಿಂಚುಪಟ್ಟಿಗಳ ಮೇಲೆ ಬರೆದ ಕೈ ಬರಹಗಳನ್ನು ಓದುವುದು. | ಅಕ್ಷರಗಳ ಮಿಂಚು ಪಟ್ಟಿಗಳು | ಶಿಕ್ಷಕ | ಹಿಂದಿನ ತರಗತಿಯ ಗೃಹಪಾಠವನ್ನು ಪರಿಶೀಲಿಸುವುದು. | ಕನ್ನಡ<br>ಗಡಿಯಾರ | ಭಾಷೆಯಲ್ಲಿನ ಎಲ್ಲಾ ಸ್ವರಗಳನ್ನು ಉಚ್ಚರಿಸುವುದು | | ಶಿಕ್ಷಕ | ಹಿಂದಿನ ಅವಧಿಯಲ್ಲಿ ನೀಡಲಾಗಿರುವ ಗೃಹಪಾಠವನ್ನು ಪರಿಶೀಲಿಸುವುದು. |
| | 35 ನಿ | | | | ಶಿಕ್ಷಕ | * 'ಆ, ತ, ಳ' ಈ ಅಕ್ಷರಗಳನ್ನು (ಶಿಕ್ಷಕರು) ಬರೆಯುವ ಕ್ರಮವನ್ನು ಹೇಳಿ ಕೊಡುವರು.<br>* ಮಕ್ಕಳಿಂದ ಮೇಲಿನ ಅಕ್ಷರಗಳಿಗೆ ಸಂಬಂಧಿಸಿದಂತೆ ಗಾಳಿಯಲ್ಲಿ ಬೆರಳು ಚಲಿಸಿ ಅಕ್ಷರ ರಚನೆ ಮಾಡಿಸುವುದು.<br>* ಕಪ್ಪು ಹಲಗೆಯಲ್ಲಿ ಮಕ್ಕಳಿಂದ ಮೇಲಿನ ಅಕ್ಷರಗಳನ್ನು ಬರೆಸಿ ಸರಿಯಾಗಿ ಬರೆಯುವ ಕ್ರಮವನ್ನು ಕಲಿಸುವರು.<br>* ಅಕ್ಷರಗಳನ್ನು ಗುರುತಿಸಲು ಅಗತ್ಯ ಚಟುವಟಿಕೆ ಮಾಡಿಸುವುದು.<br>(ಈ ಹಿಂದೆ ವಿವರಿಸಿರುವಂತೆ) | | | ಪಠ್ಯ ಪುಸ್ತಕ | ಹಿರೇಮಣಿ | ಹಿಂದಿನ ಅವಧಿಯಲ್ಲಿ ಹೇಳಲಾದ ಪಾಠಭಾಗವನ್ನು ಓದಿಸಲು ಹಿರೇಮಣಿಗೆ ಸೂಚಿಸುವರು. |
| | 05 ನಿ | | | | ಶಿಕ್ಷಕ | * ವಾಲ್‌ಸ್ಲೇಟಿನಲ್ಲಿ 'ಆ,ತ,ಳ' ಈ ಅಕ್ಷರಗಳನ್ನು ನಕಲು ಮಾಡಲು ತಿಳಿಸುವರು. | | | | ಶಿಕ್ಷಕ | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಸ್ವತಃ ಓದಿಸಿ ಅಗತ್ಯ ಮಾರ್ಗದರ್ಶನ ನೀಡುವರು.<br>* 'ಊಟ................................................ ರೂಪ ತಾಳಿದೆ'' ವರೆಗೆ ಶಿಕ್ಷಕರು ಸೂಕ್ತ ಸ್ವರಭಾರದೊಂದಿಗೆ ಓದುವರು. ಮಕ್ಕಳಿಗೆ ಹೇಳಿಕೊಟ್ಟು ಓದಿಸುವರು.<br>* ಆಯ್ದ ಪದಗಳನ್ನು ಕಪ್ಪು ಹಲಗೆಯ ಮೇಲೆ ಬರೆದು ಓದಿಸುವರು.<br>* ಆಯ್ದ ವಿದ್ಯಾರ್ಥಿಗಳಿಂದ ಮೇಲಿನ ಪಾಠಭಾಗವನ್ನು ಓದಿಸುವರು.<br>* ಮೇಲಿನ ಪಾಠಭಾಗವನ್ನು ನಕಲು ಮಾಡಿಕೊಂಡು ಬರುವಂತೆ ತಿಳಿಸುವರು. |
| | 35 ನಿ | | | | ಸ್ವಕಲಿಕೆ | ಮೇಲಿನ ಚಟುವಟಿಕೆಯಲ್ಲಿ ತೊಡಗುವರು.<br>ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. ಪಠ್ಯ ಪುಸ್ತಕದಲ್ಲಿ ನಕಲು ಮಾಡಿಕೊಂಡು ಬರುವಂತೆ ತಿಳಿಸುವರು. | | | ಪಠ್ಯ ಪುಸ್ತಕ | | |

ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ 'ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು'.

| | | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 2 | 10 ನಿ | **ಗಣಿತ**<br>**ವ್ಯವಕಲನ** | * ಚಿತ್ರಗಳು ಮತ್ತು ವಸ್ತುಗಳ ಸಹಾಯದಿಂದ 1 ರಿಂದ 9ರ ವರೆಗಿನ ಸಂಖ್ಯೆಗಳನ್ನು ಬಳಸಿ ವ್ಯವಕಲನ ಮಾಡುವುದು.<br>* '–' ಚಿಹ್ನೆಯ ಪರಿಚಯ ಮತ್ತು '–' ಚಿಹ್ನೆ ಬಳಸಿ ವ್ಯವಕಲನ ಮಾಡುವುದು. | ಪಠ್ಯ ಪುಸ್ತಕ | ಶಿಕ್ಷಕ | **ಅಭ್ಯಾಸ ಮತ್ತು ಬಳಕೆಯ ಚಟುವಟಿಕೆ :**<br>ಶಿಕ್ಷಕರು ಮಕ್ಕಳಿಗೆ ಪುಟ ಸಂಖ್ಯೆ 64, 65 ಮತ್ತು 66ರಲ್ಲಿನ ಅಭ್ಯಾಸ ಚಟುವಟಿಕೆಗಳನ್ನು ಮಾಡುವಂತೆ ಸೂಚನೆ ನೀಡುವರು. ಕಪ್ಪು ಹಲಗೆಯ ಮೇಲೆ ಕೆಲವು ಲೆಕ್ಕ ಹಾಕಿ ಬಿಡಿಸಲು ಸೂಚನೆ ನೀಡುವರು. | **ಗಣಿತ**<br>**ವ್ಯವಕಲನ** (ದಶಕ ರಹಿತ ಮತ್ತು ದಶಕ ಸಹಿತ) | * ಎರಡು ಸಂಖ್ಯೆಗಳ ದಶಕ ರಹಿತ ಮತ್ತು ದಶಕ ಸಹಿತ ವ್ಯವಕಲನ ಮಾಡುವುದು.<br>* ನಿತ್ಯ ಜೀವನದಲ್ಲಿ ವ್ಯವಕಲನಕ್ಕೆ ಸಂಬಂಧಿಸಿದಂತೆ ಸಮಸ್ಯೆಗಳನ್ನು ಪರಿಹರಿಸುವುದು. | | ಶಿಕ್ಷಕ | ವ್ಯವಕಲನದ ದಶಕ ರಹಿತ ಮತ್ತು ದಶಕ ಸಹಿತದ ಲೆಕ್ಕಗಳನ್ನು ಹಾಕಿ ಬಿಡಿಸುವಂತೆ ಸೂಚನೆ ನೀಡುವರು. |
| | 25 ನಿ | | | | ಹಿರೇಮಣಿ | ಮಕ್ಕಳು ಮೇಲೆ ಸೂಚಿಸಿರುವ ಚಟುವಟಿಕೆಗಳನ್ನು ಹಿರೇಮಣಿಯ ನೇತೃತ್ವದಲ್ಲಿ ಮಾಡುವರು. | | | | ಶಿಕ್ಷಕ | ಲೆಕ್ಕಗಳನ್ನು ಬಿಡಿಸಿದ ನಂತರ ಶಿಕ್ಷಕರು, ತರಗತಿ ಸನ್ನಿವೇಶ ಬಳಸಿ, ವ್ಯವಕಲನದ ಸಮಸ್ಯೆಗಳನ್ನು ಬಿಡಿಸುವ ವಿಧಾನವನ್ನು ಪರಿಚಯಿಸುವರು. ಸಮಸ್ಯೆಯನ್ನು ಅರ್ಥೈಸುವ ವಿಧಾನ ಹಾಗೂ ದೊಡ್ಡ ಸಂಖ್ಯೆಯಿಂದ ಚಿಕ್ಕ ಸಂಖ್ಯೆ ಕಳೆಯುವುದನ್ನು ಕುರಿತು ವಿವರಿಸುವರು.<br>ಕೆಲವು ಮಾದರಿ ಲೆಕ್ಕಗಳನ್ನು ಮಕ್ಕಳಿಂದಲೇ ಕಪ್ಪುಹಲಗೆಯ ಮೇಲೆ ಮಾಡಿಸುವರು. |
| | 10 ನಿ | | | | ಶಿಕ್ಷಕ | ಮಕ್ಕಳ ಚಟುವಟಿಕೆ ಮತ್ತು ಬರವಣಿಗೆಯನ್ನು ಪರಿಶೀಲಿಸಿ, ತಪ್ಪುಗಳನ್ನು ತಿದ್ದುವರು. | | | | ಶಿಕ್ಷಕ | ಶಿಕ್ಷಕರು ಪಠ್ಯಪುಸ್ತಕದ ಪುಟ – 100 ಹಾಗೂ 101ರಲ್ಲಿರುವ ಸಮಸ್ಯೆಗಳನ್ನು ಗುಂಪುಗಳಲ್ಲಿ ಕುಳಿತು ಪರಿಹರಿಸುವಂತೆ ಸೂಚನೆ ನೀಡುವರು. ನಂತರ ಪುಸ್ತಕದಲ್ಲಿ ಬರೆದುಕೊಳ್ಳಲು ತಿಳಿಸುವರು. |
| | 25 ನಿ | | | ಪಠ್ಯ ಪುಸ್ತಕ | ಶಿಕ್ಷಕ | ಶಿಕ್ಷಕರು, ಪುಟ – 67 ಮತ್ತು 68ರಲ್ಲಿನ ಚಟುವಟಿಕೆಗಳನ್ನು ಮಕ್ಕಳಿಂದಲೇ ಮಾಡಿಸುತ್ತಾ, ತಪ್ಪುಗಳನ್ನು ತಿದ್ದುತ್ತಾ ಸೂಕ್ತ ಮಾರ್ಗದರ್ಶನ ನೀಡುವರು. | | | ಪಠ್ಯ ಪುಸ್ತಕ | ಗುಂಪು ಕಲಿಕೆ | ಮಕ್ಕಳು ಪುಟ – 100 ಹಾಗೂ 101ರಲ್ಲಿನ ನಿತ್ಯ ಜೀವನದ ಸಮಸ್ಯೆಗಳನ್ನು ಗುಂಪುಗಳಲ್ಲಿ ಕುಳಿತು, ಬಿಡಿಸುವರು. |
| | 10 ನಿ | | | | ಶಿಕ್ಷಕ | ಮಕ್ಕಳ ಚಟುವಟಿಕೆಯನ್ನು ಪರಿಶೀಲಿಸಿ, ಅಭ್ಯಾಸ ಪುಸ್ತಕದಲ್ಲಿ ಬರೆದುಕೊಳ್ಳುವಂತೆ ಸೂಚನೆ ನೀಡುವರು. | | | | ಶಿಕ್ಷಕ | ಮಕ್ಕಳು ಲೆಕ್ಕ ಮಾಡಿರುವ ವಿಧಾನ ಹಾಗೂ ಬಂದ ಉತ್ತರಗಳನ್ನು ಪರಿಶೀಲಿಸಿ ಅಗತ್ಯ ಮಾರ್ಗದರ್ಶನ ಮಾಡುವರು. |

ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ 'ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು'.

| | | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3<br>ಪ.ಅ.<br>42 | 10 ನಿ | ಪರಿಸರ ಅಧ್ಯಯನ<br>ವಿವಿಧ ಉಡುಪುಗಳು | * ಉಡುಪಿನ ಅವಶ್ಯಕತೆ, ಉಡುಪಿನ ವಿವಿಧತೆಯನ್ನು ಗುರುತಿಸುವುದು. | | ಶಿಕ್ಷಕ | ಎರಡೂ ತರಗತಿಗೆ ಸಂಬಂಧಿಸಿದಂತೆ "ಮಾನವನಾಗಿ.................................. ........................... ಏನೇನು ಕಂಡೆ" ಎಂಬ ಅಭಿನಯ ಗೀತೆಯನ್ನು ಹೇಳಿ ಕೊಡುವರು. | ಪರಿಸರ ಅಧ್ಯಯನ<br>ಹೊರ ಸಂಚಾರ | * ಪ್ರಕೃತಿಯ ಸೌಂದರ್ಯವನ್ನು ಮೆಚ್ಚುವರು ಬೇರೆ ಬೇರೆ ಪ್ರಾಣಿಗಳ ಮನೆಗಳನ್ನು ಗುರುತಿಸುವರು. | ಪ್ರಕೃತಿಯ ಚಿತ್ರಪಟ | ಶಿಕ್ಷಕ | ಒಂದನೇ ತರಗತಿಯ ಚಟುವಟಿಕೆಯಲ್ಲಿ ಭಾಗವಹಿಸುವರು. ನಂತರ ಶಿಕ್ಷಕರು ಪ್ರಕೃತಿ ದೃಶ್ಯದ ಚಿತ್ರ ಬರೆಯಲು ತಿಳಿಸುವರು. |
| | 30 ನಿ | | | ಪಠ್ಯ ಪುಸ್ತಕ ದಲ್ಲಿರುವಂತೆ ವಿವಿಧ ರೀತಿಯ ಬಟ್ಟೆಗಳ ತುಣುಕುಗಳು | ಶಿಕ್ಷಕ | ಪಠ್ಯ ಪುಸ್ತಕ ಪುಟಸಂಖ್ಯೆ 42ಕ್ಕೆ ಸಂಬಂಧಿಸಿದಂತೆ ಚಿತ್ರಗಳನ್ನು ತೋರಿಸಿ ಪ್ರಶ್ನೆ ಕೇಳುವರು.<br>* ಸಾಧ್ಯವಾದಲ್ಲಿ ವಿವಿಧ ಬಟ್ಟೆಗಳನ್ನು ತಂದು ಪ್ರದರ್ಶಿಸಿ ಅವುಗಳ ಪರಿಚಯ ಮಾಡಿಸುವರು.<br>* ಉಡುಪುಗಳನ್ನು ವಿವಿಧ ಬಟ್ಟೆಗಳಿಂದ ತಯಾರಿಸಿರುತ್ತಾರೆ ಎಂಬುದನ್ನು ಮನದಟ್ಟು ಮಾಡುವರು. | | | | ಸ್ವಕಲಿಕೆ | * ಹಿಂದಿನ ಅವಧಿಯಲ್ಲಿ ಮುಗಿದಿರುವ ಕಲಿಕಾ ಹಂತಕ್ಕೆ ಸೀಮಿತವಾಗಿ ಪ್ರಕೃತಿಯ ದೃಶ್ಯಗಳ ಚಿತ್ರ ಬರೆಯುವರು. |
| | 05 ನಿ | | | | ಶಿಕ್ಷಕ | ಹಿರೇಮಣಿಯ ನೇತೃತ್ವದಲ್ಲಿ ಮಕ್ಕಳು ಅವರ ಮನೆಗಳಲ್ಲಿ ವಿವಿಧ ಕಾಲಗಳಲ್ಲಿ ಬಳಸುವ ಬಟ್ಟೆಗಳ ಹೆಸರು ಹೇಳಿಸಲು ತಿಳಿಸುವುದು.<br>ಉದಾ : ಬೇಸಿಗೆ ಕಾಲ, ಚಳಿಗಾಲ .... ಇತ್ಯಾದಿ. | | | | ಶಿಕ್ಷಕ | ಮೇಲಿನ ಚಟುವಟಿಕೆ ಪರಿಶೀಲಿಸಿ ಮುಂದಿನ ಹಂತಕ್ಕೆ ಸಿದ್ಧತೆ ಮಾಡಿಕೊಳ್ಳುವರು. |
| | 35 ನಿ | | | | ಹಿರೇಮಣಿ | ಮೇಲಿನ ಚಟುವಟಿಕೆಯಲ್ಲಿ ತೊಡಗುವರು.<br>ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. ಮುಂದಿನ ದಿನ ಶಾಲೆಗೆ ಬರುವಾಗ ವಿವಿಧ ರೀತಿಯ ಬಟ್ಟೆ ಚೂರುಗಳನ್ನು ಸಂಗ್ರಹಿಸಿ ತರಲು ತಿಳಿಸುವರು. | | | ಪಠ್ಯ ಪುಸ್ತಕ ಪ್ರಾಣಿಗಳ ಪಕ್ಷಿಗಳ ಚಿತ್ರಪಟ | ಶಿಕ್ಷಕ | ಪಠ್ಯಪುಸ್ತಕ 15, 16ಕ್ಕೆ ಸಂಬಂಧಿಸಿದಂತೆ ಕಲಿಕಾಂಶಗಳನ್ನು ಹೇಳಿಕೊಡುವರು.<br>* ಮೇಲಿನ ಕಲಿಕಾಂಶಕ್ಕೆ ಸಂಬಂಧಿಸಿದಂತೆ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವರು.<br>* ಮಕ್ಕಳು ತಾವು ನೋಡಿರುವ ಪ್ರಾಣಿಗಳು ಪಕ್ಷಿಗಳು ಹಾಗೂ ಅವುಗಳ ವಾಸಸ್ಥಳಗಳ ಬಗ್ಗೆ ಪ್ರಶ್ನಿಸಿ ಉತ್ತರ ಪಡೆಯುವರು. |

ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ 'ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು'.

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ಸಾಮರ್ಥ್ಯ ಮತ್ತು ಉಪ ಸಾಮರ್ಥ್ಯ | ಕಲಿಕಾ ಉದ್ದೇಶ | ಕಲಿಕೋಪಕರಣ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಸಾಮರ್ಥ್ಯ ಮತ್ತು ಉಪ ಸಾಮರ್ಥ್ಯ | ಕಲಿಕಾ ಉದ್ದೇಶ | ಕಲಿಕೋಪಕರಣ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 4 | 80 ನಿ | ಸಾ. ಶ. ಶ. ಕಾರ್ಯ<br>ಎರಡು ಆಕೃತಿಗಳನ್ನು ತಯಾರಿಸುವುದು | * ಸೈಕಲ್ ವಾಲ್‌ಟ್ಯೂಬ್ ಮತ್ತು ತೆಂಗಿನ ಕಡ್ಡಿ ಉಪಯೋಗಿಸಿ ಎರಡು ರೇಖಾಕೃತಿಗಳನ್ನು ತಯಾರಿಸುವುದು. | ತೆಂಗಿನ ಕಡ್ಡಿ<br>ಸೈಕಲ್ ವಾಲ್ ಟ್ಯೂಬ್ | ಶಿಕ್ಷಕರು | ಶಿಕ್ಷಕರು ಮಕ್ಕಳನ್ನು ವೃತ್ತಾಕಾರದಲ್ಲಿ ಕೂರಿಸಿಕೊಂಡು ತೆಂಗಿನ ಕಡ್ಡಿ ಮತ್ತು ಸೈಕಲ್ ವಾಲ್‌ಟ್ಯೂಬ್‌ನ್ನು ಸೂಕ್ತ ಅಳತೆಗೆ ಕತ್ತರಿಸಿಕೊಂಡು ಸೈಕಲ್ ವಾಲ್‌ಟ್ಯೂಬ್‌ನ ಒಳಗೆ ತೆಂಗಿನ ಕಡ್ಡಿ ಸೇರಿಸಿ ತ್ರಿಭುಜ ಚೌಕ, ಆಯತ ಮುಂತಾದ ರೇಖಾಕೃತಿಗಳನ್ನು ಮಾಡಿ ತೋರಿಸುವರು.<br>ಅದೇ ರೀತಿಯಾಗಿ ಮಕ್ಕಳಿಗೆ ಮಾಡಲು ತಿಳಿಸುವರು.<br>ಮಕ್ಕಳು ಶಿಕ್ಷಕರು ಸೂಚಿಸಿದಂತೆ ರೇಖಾಕೃತಿಗಳನ್ನು ತಯಾರಿಸಿ ಪ್ರದರ್ಶಿಸುವರು. ಉತ್ತಮವಾಗಿ ತಯಾರಿಸಿದ ಮಕ್ಕಳನ್ನು ಪ್ರಶಂಸಿಸುವರು. | | | | | <br>ಒಂದನೇ ತರಗತಿಯ ಮಕ್ಕಳ ಜೊತೆಯಲ್ಲಿ ಸೇರಿಕೊಂಡು ಅವರು ಮಾಡುವ ಚಟುವಟಿಕೆಯಲ್ಲಿ ಭಾಗವಹಿಸುವರು. |

| | | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1<br>KAN 69 | 05 ನಿ | **ಕನ್ನಡ**<br>**ಪದ ಓದು, ಅಕ್ಷರ ಕಲಿ : ಹಂತ – 5** (ಎ, ಏ, ಇ, ಆ, ತ, ಳ) | * ವರ್ಣಮಾಲೆಯ ಸರಳ ............... ಗುರುತಿಸುವುದು.<br>* ಅಚ್ಚಾದ ದಪ್ಪ ಅಕ್ಷರಗಳನ್ನು ............... ಓದುವುದು. | ಅಕ್ಷರ ಮಿಂಚು ಪಟ್ಟಿಗಳು ಪದರಚನೆ ಹಾಡುಗಳು ಕಪ್ಪು ಹಲಗೆ<br>ನೋಟ್ ಪುಸ್ತಕ | ಶಿಕ್ಷಕ | ಹಿಂದಿನ ತರಗತಿಯ ಗೃಹಪಾಠವನ್ನು ಪರಿಶೀಲಿಸುವರು. | **ಕನ್ನಡ**<br>**ಗಡಿಯಾರ** | ಭಾಷೆಯಲ್ಲಿನ ಎಲ್ಲಾ ಸ್ವರಗಳನ್ನು ಉಚ್ಚರಿಸುವುದು. | ಪಠ್ಯಪುಸ್ತಕ | ಶಿಕ್ಷಕ | ಹಿಂದಿನ ತರಗತಿಯ ಗೃಹಪಾಠವನ್ನು ಪರಿಶೀಲಿಸುವರು. |
| | 40 ನಿ | | | | ಶಿಕ್ಷಕ | **ಮೌಲ್ಯಮಾಪನ ಹಂತ :**<br>* ಅಕ್ಷರ ಮಿಂಚುಪಟ್ಟಿಗಳನ್ನು ಬಳಸಿ ಹಂತ 5ಕ್ಕೆ ಸಂಬಂಧಿಸಿದ ಪದಗಳನ್ನು ರಚಿಸಿ ಓದಿಸುವರು.<br>* ಕೇಳಿದ ಅಕ್ಷರ ಗುರುತಿಸುವ ಚಟುವಟಿಕೆ ಮಾಡಿಸುವರು.<br>* ಹಂತ – 5ರ ಅಕ್ಷರಗಳ ಜೊತೆ ಈಗಾಗಲೇ ಕಲಿತಿರುವ ಅಕ್ಷರಗಳನ್ನು ಬಳಸಿಕೊಂಡು ಕೇಳಿದ ಪದ ರಚನೆಯನ್ನು ವಿದ್ಯಾರ್ಥಿಗಳಿಂದ ಮಾಡಿಸುವರು.<br>* ಪಠ್ಯಪುಸ್ತಕದಲ್ಲಿನ ಪದಗಳನ್ನು ಓದಿಸುವರು ಪಠ್ಯಪುಸ್ತಕ ಪುಟ 45 ಮತ್ತು 46 ಚಟುವಟಿಕೆಗಳನ್ನು ಮಾಡಿಸುವರು. ಇವುಗಳನ್ನು ಆದರಿಸಿ ಮೌಲ್ಯಮಾಪನ ಮಾಡಿಸುವರು. | | | | ಹಿರೇಮಣಿ | ಹಿಂದಿನ ಅವಧಿಯಲ್ಲಿ ಹೇಳಲಾದ ಪಾಠ ಭಾಗವನ್ನು ಓದಿಸಲು ಹಿರೇಮಣಿಗೆ ತಿಳಿಸುವರು.<br>ಮೇಲಿನ ಚಟುವಟಿಕೆಯಲ್ಲಿ ತೊಡಗುವರು. |
| | 35 ನಿ | | | | ಹಿರೇಮಣಿ | ಮೇಲಿನ ಚಟುವಟಿಕೆಯನ್ನು ನೋಟ್ ಪುಸ್ತಕದಲ್ಲಿ ನಕಲು ಮಾಡಲು ಸೂಚಿಸುವರು. | | | | ಶಿಕ್ಷಕ | ಹಿಂದಿನ ಅವಧಿಯಲ್ಲಿ ವಿವರಿಸಿರುವ ಕ್ರಮದಲ್ಲಿ "ನಾನು ........................ ಸಮಯ ಪ್ರಜ್ಞೆ" ವರೆಗೆ ಪಾಠ ಬೋಧನೆ ಮಾಡುವರು. |
| 2 | 10 ನಿ | **ಜೀವನ ವಿಜ್ಞಾನ**<br>**"ಲಗೋರಿ ಆಟ"** | * ದೈಹಿಕ ಚಟುವಟಿಕೆಯುಳ್ಳ ಆಟಗಳು ಮನೋಲ್ಲಾಸ ಪಡೆಯುವುದನ್ನು ರೂಢಿಸಿಕೊಳ್ಳುವುದು. | ಚೆಂಡು, 6–8 ಚಪ್ಪಟೆಯಾದ ಸಣ್ಣ ಕಲ್ಲುಗಳು | ಶಿಕ್ಷಕ | ಶಿಕ್ಷಕರು ಎಲ್ಲಾ ಮಕ್ಕಳನ್ನು ಸಾಲಾಗಿ ಆಟದ ಮೈದಾನಕ್ಕೆ ಕರೆದುಕೊಂಡು ಹೋಗುವರು. ಆಟದ ಮೈದಾನದಲ್ಲಿ ಲಭ್ಯವಾಗುವ ಚಪ್ಪಟೆಕಲ್ಲುಗಳನ್ನು ಆಯ್ದುತರುವಂತೆ ಶಿಕ್ಷಕರು ಸೂಚನೆ ನೀಡುವರು. | | | | | 1ನೇ ತರಗತಿಯಲ್ಲಿರುವ ಚಟುವಟಿಕೆ ಎರಡನೇ ತರಗತಿಗೂ ಅನ್ವಯಿಸುವುದು |
| | 60 ನಿ | | | | ಶಿಕ್ಷಕ | ಹಿರಿಯ ವಿದ್ಯಾರ್ಥಿಗಳ ಸಹಕಾರದಿಂದ ಶಿಕ್ಷಕರು, ಮಕ್ಕಳಿಗೆ ಲಗೋರಿ ಆಟದ ವಿಧಾನ ಹಾಗೂ ನಿಯಮಗಳನ್ನು ಪರಿಚಯಿಸುವರು.<br>ನಂತರ ಹಿರಿಯ (5ನೇ ತರಗತಿಯ) ವಿದ್ಯಾರ್ಥಿಗಳ ನೇತೃತ್ವದಲ್ಲಿ ಲಗೋರಿ ಆಡುವಂತೆ ಸೂಚನೆ ನೀಡುವರು. | | | | | |
| | 10 ನಿ | | | | ಶಿಕ್ಷಕ | ಎಲ್ಲಾ ವಿದ್ಯಾರ್ಥಿಗಳನ್ನು ಒಂದೆಡೆಗೆ ಸೇರಿಸಿ ಜೋಡಿಸಿದ ಕಲ್ಲುಗಳನ್ನು ಮೈದಾನದಿಂದ ಹೊರಗೆ ಹಾಕಲು ಆದೇಶಿಸಿ ನಂತರ ಸಾಲಾಗಿ ತರಗತಿಗೆ ಹಿಂದಿರುಗುವಂತೆ ಸೂಚನೆ ನೀಡುವರು. | | | | | |

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಎರಡನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3<br>ಪ.ಅ.<br>43 | 05 ನಿ | ಪರಿಸರ ಅಧ್ಯಯನ<br>ವಿವಿಧ ಉಡುಪುಗಳು | ಉಡುಪಿನ ಅವಶ್ಯಕತೆ ಉಡುಪಿನ ವಿವಿಧತೆಯನ್ನು ಗುರುತಿಸುವುದು. | ಅಭಿನಯ ಗೀತೆ | ಶಿಕ್ಷಕ | ಎರಡೂ ತರಗತಿಯ ಮಕ್ಕಳನ್ನು ಒಟ್ಟಾಗಿ ಸೇರಿಸಿ ಚೈತನ್ಯ ಪುಸ್ತಕದಲ್ಲಿರುವ "ರೇಲಾ ರೇಲಾ.................................................. ..............................." ಹಾಡನ್ನು ಹಾಡಿಸುವರು. | ಪರಿಸರ ಅಧ್ಯಯನ<br>ಹೊರ ಸಂಚಾರ | * ಪ್ರಕೃತಿ ಸೌಂದರ್ಯವನ್ನು ಮೆಚ್ಚುವರು 'ಬೇರೆ ಬೇರೆ ಪ್ರಾಣಿಗಳ ಮನೆಗಳನ್ನು ಗುರುತಿಸುವರು.' | ಪಠ್ಯ ಪುಸ್ತಕ | | 1ನೇ ತರಗತಿಯಲ್ಲಿನ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. |
| | 35 ನಿ | | | ಪಠ್ಯ ಪುಸ್ತಕ | ಶಿಕ್ಷಕ<br>ಹಿರೇಮಣಿ | ಪಠ್ಯಪುಸ್ತಕ ಪುಟ ಸಂಖ್ಯೆ 43ರ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯಲು ಹಿರೇಮಣಿಗೆ ಸೂಚಿಸುವುದು.<br>ಮಕ್ಕಳು ಮೇಲಿನ ಚಟವಟಿಕೆಯಲ್ಲಿ ತೊಡಗುವರು. | | | | ಶಿಕ್ಷಕ | **ಪುನರ್ಬಲನ ಚಟುವಟಿಕೆ ಹಂತ :**<br>ಪಠ್ಯಪುಸ್ತಕ ಪುಟ 17ಕ್ಕೆ ಸಂಬಂಧಿಸಿದಂತೆ 'ತಿಳಿ–ಕಲಿ' ವಿಭಾಗದ 'ಅ', 'ಆ' ಚಟುವಟಿಕೆಗಳನ್ನು ಮಾಡಿಸುವುದು. ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆದು ಉತ್ತರವನ್ನು ನೋಟ್ ಪುಸ್ತಕ ಮತ್ತು ಅಭ್ಯಾಸದ ಹಾಳೆಗಳಲ್ಲಿ ಭರ್ತಿ ಮಾಡಿಸುವುದು. |
| | 05 ನಿ | | | | ಶಿಕ್ಷಕ | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. | | | | ಶಿಕ್ಷಕ | ದಾರದಿಂದ ಜೇಡರ ಬಲೆ ತಯಾರಿಸುವಂತೆ ಹೇಳುವರು. |
| | 30 ನಿ | | | ಪಠ್ಯ ಪುಸ್ತಕದಲ್ಲಿನ ಅಭ್ಯಾಸಗಳು | ಶಿಕ್ಷಕ<br>ಶಿಕ್ಷಕ | ಮಕ್ಕಳು ತಂದಿರುವ ಬಟ್ಟೆ ಚೂರುಗಳನ್ನು ಪುಟ 43ರ ಖಾಲಿ ಜಾಗದಲ್ಲಿ ಅಂಟಿಸುವರು.<br>* ಹತ್ತಿ, ಉಣ್ಣೆ, ರೇಷ್ಮೆ, ನೈಲಾನ್ ಬಟ್ಟೆಯ ಚೂರುಗಳು ಇರುವಂತೆ ನೋಡಿಕೊಳ್ಳುವರು.<br>ಸಾಮರ್ಥ್ಯಕ್ಕೆ ತಕ್ಕಂತೆ ಇತರೆ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವರು. | | | | ಗುಂಪು ಚಟುವಟಿಕೆ | ಮೇಲಿನ ಚಟುವಟಿಕೆಯಲ್ಲಿ ತೊಡಗುವರು |
| | 05 ನಿ | | | | | ಸಾಮರ್ಥ್ಯಕ್ಕೆ–ತಕ್ಕಂತೆ ಗೃಹಪಾಠ ನೀಡುವರು. | | | | ಶಿಕ್ಷಕ | ಸಾಮರ್ಥ್ಯಕ್ಕೆ ತಕ್ಕಂತೆ ಅಗತ್ಯ ಗೃಹ ಪಾಠ ನೀಡುವರು. |
| | 80 ನಿ | ಸಾ.ಉ.ಉ.ಕಾ.<br>ತೆಂಗಿನ ಗರಿಯಿಂದ ಗಡಿಯಾರ ತಯಾರಿಕೆ | ತೆಂಗಿನ ಗರಿಗಳಿಂದ ಗಡಿಯಾರ ತಯಾರಿಸುವುದನ್ನು ಕಲಿಯುವರು | ತೆಂಗಿನ–ಗರಿ | ಶಿಕ್ಷಕರು | ಮಕ್ಕಳಿಗೆ ಹಿಂದಿನ ದಿನವೇ ತೆಂಗಿನ ಗರಿಗಳನ್ನು ತರಲು ತಿಳಿಸಿದ್ದು; ಮಕ್ಕಳು ತಂದಿರುವ ತೆಂಗಿನ ಗರಿಗಳನ್ನು ಉಪಯೋಗಿಸಿಕೊಂಡು ಗಡಿಯಾರವನ್ನು ಶಿಕ್ಷಕರು ಪ್ರಾತ್ಯಕ್ಷಿಕೆಯಾಗಿ ಮಾಡಿ ತೋರಿಸುವರು. ಮಾಡುವ ವಿಧಾನವನ್ನು ಮಕ್ಕಳಿಗೆ ವಿವರಿಸಿ ತಿಳಿಸುವರು.<br>ಅದೇ ರೀತಿಯಾಗಿ ಪ್ರತಿ ಮಕ್ಕಳಿಂದ ಒಂದೊಂದು ಗಡಿಯಾರವನ್ನು ಮಾಡಿಸುವರು. ಎಲ್ಲಾ ಗಡಿಯಾರಗಳನ್ನು ಪ್ರದರ್ಶಿಸುವರು.<br>ಉತ್ತಮವಾಗಿ ಮಾಡಿದ ಮಕ್ಕಳನ್ನು ಪ್ರಶಂಸಿಸುವರು. | ಒಂದನೇ ತರಗತಿಯ ಮಕ್ಕಳ ಜೊತೆ ಸೇರಿ ಚಟುವಟಿಕೆಯಲ್ಲಿ ಭಾಗವಹಿಸುವರು. | | | | |

ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ 'ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು'.

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1<br>KAN 70 | 05 ನಿ | ಕನ್ನಡ<br>* ಪದ ಓದು ಅಕ್ಷರ ಕಲಿ ಹಂತ – 6 (ಓ, ಔ, ಹ. ಶ.) | * ವರ್ಣಮಾಲೆಯ ಸರಳ ಅಕ್ಷರಗಳನ್ನು ಒಟ್ಟಾಗಿ ಮತ್ತು ಬಿಡಿಯಾಗಿ ಗುರುತಿಸುವುದು.<br>* ಅಚ್ಚಾದ ದಪ್ಪ ಅಕ್ಷರಗಳನ್ನು ಕಪ್ಪು ಹಲಗೆ ಹಾಗೂ ಮಿಂಚುಪಟ್ಟಿಗಳ ಮೇಲೆ ಬರೆದ ಕೈ ಬರಹಗಳನ್ನು ಓದುವುದು. | | ಶಿಕ್ಷಕ | ಹಿಂದಿನ ಅವಧಿಯ ಗೃಹಪಾಠವನ್ನು ಪರಿಶೀಲಿಸುವರು. | ಕನ್ನಡ<br>ಗಡಿಯಾರ | * ಭಾಷೆಯಲ್ಲಿನ ಎಲ್ಲಾ ಸ್ವರಗಳನ್ನು ಉಚ್ಚರಿಸುವುದು | | ಶಿಕ್ಷಕ | ಹಿಂದಿನ ಅವಧಿಯಲ್ಲಿ ನೀಡಿರುವ ಗೃಹಪಾಠವನ್ನು ಪರಿಶೀಲಿಸುವರು.<br>* ಹಿರೇಮಣಿ ನೇತೃತ್ವದಲ್ಲಿ ಪಾಠ ಓದಿಸಲು ಸೂಚಿಸುವರು. |
| | 35 ನಿ | | | ಅಕ್ಷರಗಳ ಮಿಂಚು ಪಟ್ಟಿಗಳು | ಶಿಕ್ಷಕ | **ಕಲಿಕೆಯ ಚಟುವಟಿಕೆ :**<br>* ಓ, ಔ, ಹ, ಶ ಅಕ್ಷರಗಳನ್ನು ಈ ಹಿಂದೆ ವಿವರಿಸಿರುವ ಕ್ರಮದಲ್ಲಿ ಓದುವುದನ್ನು ಕಲಿಸುವರು.<br>* ಅಕ್ಷರ ಪದ ಚಿತ್ರಗಳನ್ನು ಪರಿಚಯಿಸಿ ಓದಿಸುವರು.<br>* ಹಿಂದೆ ಹೇಳಲಾದ ಕ್ರಮದಲ್ಲಿ ಅಕ್ಷರಗಳನ್ನು ಬರೆಯುವುದನ್ನು ಕಲಿಸುವರು. | | | | ಹಿರೇಮಣಿ | ಮೇಲಿನ ಚಟುವಟಿಕೆಯಲ್ಲಿ ತೊಡಗುವರು. |
| | 05 ನಿ | | | ವಾಲ್ ಸ್ಲೇಟ್ | ಶಿಕ್ಷಕ | * ಹಂತ 6ರ ಅಕ್ಷರಗಳನ್ನು ವಾಲ್‌ಸ್ಲೇಟಿನಲ್ಲಿ ನಕಲು ಮಾಡಲು ಸೂಚಿಸುವರು. | | | | ಶಿಕ್ಷಕ | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. |
| | 30 ನಿ | | | | ಸ್ವಕಲಿಕೆ | ಮೇಲಿನ ಚಟುವಟಿಕೆಯಲ್ಲಿ ತೊಡಗುವರು. | | | ಪಠ್ಯ ಪುಸ್ತಕ | ಶಿಕ್ಷಕ | ಶಿಕ್ಷಕರು ಇಡೀ ಪಾಠವನ್ನು ಸೂಕ್ತ ಸ್ವರಭಾರದೊಂದಿಗೆ ಓದುವರು. ಮಕ್ಕಳು ಪಾಠವನ್ನು ಗಮನಿಸುತ್ತಾ ಆಲಿಸುವರು.<br>* ಪ್ರತಿ ವಿದ್ಯಾರ್ಥಿಗೆ ಎರಡು–ಮೂರು ಸಾಲಿನಂತೆ ಇಡೀ ಪಾಠವನ್ನು ಒಮ್ಮೆ ವಿದ್ಯಾರ್ಥಿಗಳಿಂದ ಓದಿಸುವರು.<br>* ಸರಳ ಪ್ರಶ್ನೆಗಳನ್ನು ಹೇಳಿ ಉತ್ತರ ಪಡೆಯುತ್ತಾ ಪಾಠವನ್ನು ಅರ್ಥಮಾಡಿಸುವರು.<br>* ಈಗಾಗಲೇ ಬರೆಸಿರುವ ಹೊಸ ಪದಗಳ ಪಟ್ಟಿಯನ್ನು ಮಕ್ಕಳಿಂದ ಓದಿಸುವರು. |
| | 05 ನಿ | | | | ಶಿಕ್ಷಕ | ಮೇಲಿನ ಚಟುವಟಿಕೆಯನ್ನು ಪರಿಶೀಲಿಸಿ ತಪ್ಪುಗಳನ್ನು ತಿದ್ದುವರು. ಹಂತ 5 ಮತ್ತು 6ರ ಅಕ್ಷರಗಳನ್ನು ಪಠ್ಯಪುಸ್ತಕದ ಅಭ್ಯಾಸದ ಹಾಳೆಯಲ್ಲಿ ನಕಲು ಮಾಡಿಕೊಂಡು ಬರುವಂತೆ ತಿಳಿಸುವರು. | | | | ಶಿಕ್ಷಕ | ನಂತರ ಮೇಲಿನ ಪಾಠಕ್ಕೆ ಸಂಬಂಧಿಸಿದಂತೆ ಗೃಹಪಾಠ ನೀಡುವುದು. ಅಥವಾ ವರ್ಣಮಾಲೆಯ ಎಲ್ಲಾ ಅಕ್ಷರಗಳನ್ನು ಅನುಕ್ರಮವಾಗಿ ಬರೆದುಕೊಂಡು ಬರಲು ತಿಳಿಸುವರು. |

ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ 'ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು'.

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 2 | | ಗಣಿತ<br>ವ್ಯವಕಲನ | * ಚಿತ್ರಗಳು ಮತ್ತು ವಸ್ತುಗಳ ಸಹಾಯದಿಂದ 1 ರಿಂದ 9ರ ವರೆಗಿನ ಸಂಖ್ಯೆಗಳನ್ನು ಬಳಸಿ ವ್ಯವಕಲನ ಮಾಡುವುದು. * '–' ಚಿಹ್ನೆಯ ಪರಿಚಯ ಮತ್ತು ವ್ಯವಕಲನ ಚಿಹ್ನೆ ಬಳಸಿ ವ್ಯವಕಲನ ಮಾಡುವುದು. | **ವಿಶೇಷ ಸೂಚನೆ :** ಎರಡೂ ತರಗತಿಯ ಸಾಮರ್ಥ್ಯಗಳಲ್ಲಿ ಸಾಮ್ಯತೆ ಇರುವುದರಿಂದ ಎರಡೂ ತರಗತಿಯನ್ನು ಒಟ್ಟಿಗೆ ಸೇರಿಸಿ ಅಭ್ಯಾಸ ಮತ್ತು ಬಳಕೆಯ ಚಟುವಟಿಕೆಯನ್ನು ಮಾಡಿಸಲಾಗುವುದು. | | | ಗಣಿತ<br>ವ್ಯವಕಲನ (ದಶಕ ರಹಿತ ಮತ್ತು ದಶಕ ಸಹಿತ) | * ಎರಡು ಸಂಖ್ಯೆಗಳ ದಶಕ ರಹಿತ ಮತ್ತು ದಶಕ ಸಹಿತ ವ್ಯವಕಲನ ಮಾಡುವುದು.<br>* ನಿತ್ಯ ಜೀವನದಲ್ಲಿ ವ್ಯವಕಲನಕ್ಕೆ ಸಂಬಂಧಿಸಿದಂತೆ ಸಮಸ್ಯೆಗಳನ್ನು ಪರಿಹರಿಸುವುದು. | | | |
| | 10 ನಿ | | | 1 ರಿಂದ 9ರ ವರೆಗೆ ವ್ಯವಕಲನದ ಲೆಕ್ಕಗಳನ್ನು ಒಳಗೊಂಡ ಕಾಗದದ ಮೀನುಗಳು, ಗಾಳ (ಆಯಸ್ಕಾಂತ, ದಾರ, ಕೋಲು) | ಶಿಕ್ಷಕ | ಎರಡೂ ತರಗತಿಯ ಮಕ್ಕಳನ್ನು ಒಂದೇ ವೃತ್ತದಲ್ಲಿ ಕೂರಿಸಿ, ಮೀನು ಮತ್ತು ಗಾಳದ ಆಟ ಚಟುವಟಿಕೆಯ ಮೂಲಕ ಮಕ್ಕಳಿಗೆ ವ್ಯವಕಲನಕ್ಕೆ ಸಂಬಂಧಿಸಿದ (1 ರಿಂದ 9) ಅಭ್ಯಾಸ ಮತ್ತು ಬಳಕೆಯ ಚಟುವಟಿಕೆಯನ್ನು ಮಾಡಿಸುವುದರ ಸಲುವಾಗಿ ಸೂಕ್ತ ಪೂರ್ವಸಿದ್ಧತೆ ಮಾಡಿಕೊಳ್ಳುವರು. | | | ವ್ಯವಕಲನದ ಲೆಕ್ಕಗಳನ್ನು ಒಳಗೊಂಡ ಕಾಗದದ ಮೀನುಗಳು ಗಾಳ (ಆಯಸ್ಕಾಂತ ದಾರ, ಕೋಲು) | ಶಿಕ್ಷಕ | (ದಶಕ ಸಹಿತ ಮತ್ತು ದಶಕ ರಹಿತ ಹಾಗೂ ನಿತ್ಯಜೀವನಕ್ಕೆ ಸಂಬಂಧಿಸಿದ ವ್ಯವಕಲನದ ಲೆಕ್ಕಗಳನ್ನು ಕಾಗದದ ಮೀನುಗಳ ಮೇಲೆ ಬರೆದು ಅದಕ್ಕೆ ಗುಂಡುಸೂಜಿ ಚುಚ್ಚುವುದು. ಹೀಗೆ ಸೂಕ್ತ ಸಿದ್ಧತೆ ಮಾಡಿಕೊಂಡಿರಬೇಕು. |
| | 60 ನಿ | | | | ಶಿಕ್ಷಕ | ಮಕ್ಕಳು 1 ರಿಂದ 9ಕ್ಕೆ ಮೀರದಂತೆ ವ್ಯವಕಲನದ ಲೆಕ್ಕಗಳನ್ನು ಮೀನು ಮತ್ತು ಗಾಳದ ಚಟುವಟಿಕೆಯ ಮೂಲಕ ಮಾಡುವರು. | | | | ಸ್ವಕಲಿಕೆ | ಮಕ್ಕಳು ಮೇಲೆ ಸೂಚಿಸಿದಂತೆ ವ್ಯವಕಲನಕ್ಕೆ ಸಂಬಂಧಿಸಿದ ಲೆಕ್ಕಗಳನ್ನು ಮೀನು ಮತ್ತು ಗಾಳದ ಚಟುವಟಿಕೆಯ ಮೂಲಕ ಮಾಡುವರು.<br>(ಪಠ್ಯಪುಸ್ತಕದ ಪುಟ–102 ಮತ್ತು 103ರ ಲೆಕ್ಕಗಳನ್ನು ಒಳಗೊಂಡಂತೆ) |
| | 10 ನಿ | | | | ಶಿಕ್ಷಕ | ಮಕ್ಕಳ ಚಟುವಟಿಕೆಗಳನ್ನು ಪರಿಶೀಲಿಸುತ್ತಾ ಸೂಕ್ತ ಸಲಹೆ ಮತ್ತು ಮಾರ್ಗದರ್ಶನ ನೀಡುವರು. | | | | ಶಿಕ್ಷಕ | ಮಕ್ಕಳ ಚಟುವಟಿಕೆಗಳನ್ನು ಪರಿಶೀಲಿಸುತ್ತಾ ಸೂಕ್ತ ಸಲಹೆ ಮತ್ತು ಮಾರ್ಗದರ್ಶನ ನೀಡುವರು. |
| 3<br>ಮೊದಲ<br>40ನಿ<br>KAN<br>70½ | 20 ನಿ | ಕನ್ನಡ<br>ಪದ ಓದು ಅಕ್ಷರ ಕಲಿ ಹಂತ– 5 | * ವರ್ಣಮಾಲೆಯ ಸರಳ ..........<br>* ಅಚ್ಚಾದ ದಪ್ಪ .......... | ಪಠ್ಯ ಪುಸ್ತಕ | ಶಿಕ್ಷಕ | **ಪುನರ್ಬಲನ ಚಟುವಟಿಕೆ ಹಂತ :**<br>* ಪುಟ 52ರ ಪದಗಳನ್ನು ಓದಿಸುವರು.<br>* ಅಕ್ಷರಗಳ ಮಿಂಚುಪಟ್ಟಿ ಬಳಸಿ ಹೊಸ ಪದಗಳ ರಚನೆ ಮಾಡಿಸುವರು.<br>* ಈ ಪದಗಳನ್ನು ಬರೆಸುವರು ಮತ್ತು ಓದಿಸುವರು. | ಕನ್ನಡ<br>ಗಡಿಯಾರ | * ಭಾಷೆಯಲ್ಲಿನ ಎಲ್ಲ .......... | ಪಠ್ಯ ಪುಸ್ತಕ | ಸ್ವಕಲಿಕೆ | ಪಾಠ ಓದಿಕೊಳ್ಳಲು ಹೇಳುವರು.<br>**ಪುನರ್ಬಲನ ಚಟುವಟಿಕೆ ಹಂತ :**<br>ಪುಟ 6ರ ಪ್ರಶ್ನೆಗಳಿಗೆ ಉತ್ತರ ಹೇಳಿಸಿ ಅಭ್ಯಾಸ ಪುಸ್ತಕದಲ್ಲಿ ಬರೆಸುವುದು. |
| | 20 ನಿ | | | | ಸ್ವಕಲಿಕೆ | ಮೇಲಿನ ಚಟುವಟಿಕೆಯಲ್ಲಿ ತೊಡಗುವರು (ಹಿರೇಮಣಿ ನೇತೃತ್ವದಲ್ಲಿ) | | | | ಶಿಕ್ಷಕ | ಮೇಲಿನ ಅಭ್ಯಾಸದ ಹಾಳೆಗಳನ್ನು ನೋಟ್ ಪುಸ್ತಕದಲ್ಲಿ ನಕಲು ಮಾಡಿಕೊಂಡು ಬರುವಂತೆ ತಿಳಿಸುವರು. |

ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ 'ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು'.

| | | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3<br>ನಂತರದ<br>40 ನಿ | 05 ನಿ | ಜೀವನ ವಿಜ್ಞಾನ<br>"ವೃಕ್ಷಾಸನದ ಪರಿಚಯ ಮತ್ತು ಅಭ್ಯಾಸ" | * ಶರೀರದ ರಚನೆ ಹಾಗೂ ಕಾರ್ಯಗಳನ್ನು ವೈಜ್ಞಾನಿಕವಾಗಿ ಅರಿತು ಉತ್ತಮ ಆರೋಗ್ಯವರ್ಧನೆಗೆ ಸಮನ್ವಯಗೊಳಿಸುವರು.<br>* ವೃಕ್ಷಾಸನದ ಅಭ್ಯಾಸದಿಂದ ಸ್ಮರಣಶಕ್ತಿ, ಏಕಾಗ್ರತೆಯ ವರ್ಧನೆಗೆ ಸಹಕಾರಿ ಎಂದು ತಿಳಿಸುವುದು. | ವೃಕ್ಷಾಸನ ಭಂಗಿಯ ಚಿತ್ರಪಟ | ಶಿಕ್ಷಕ | 1 ಮತ್ತು ಎರಡನೇ ತರಗತಿಗಳ ಮಕ್ಕಳಿಗೆ ಈಗಾಗಲೇ ಹಿಂದಿನ ಅವಧಿಯಲ್ಲಿ ವಿವರಿಸಿರುವಂತೆ ಯೋಗಾಸನಗಳ ಬಗ್ಗೆ ಹಿಮ್ಮಾಹಿತಿ ಪಡೆಯುವುದು. | | | | | 1 ಮತ್ತು 2ನೇ ತರಗತಿಗಳನ್ನು ಸಾಮ್ಯತೆಗೊಳಿಸಿರುವುದರಿಂದ ಎರಡೂ ತರಗತಿಗಳಿಗೆ ಸಮಾನ ಚಟುವಟಿಕೆ |
| | 10 ನಿ | | | | ಶಿಕ್ಷಕ | ನಂತರ ನಿಂತು ಮಾಡುವ ಚಟುವಟಿಕೆಗಳನ್ನು ಮಾಡಿಸುವುದು.<br>*ಉದಾಹರಣೆಗೆ :*<br>– ನಿಂತಲ್ಲೇ ಓಟ<br>– ತಲೆಯನ್ನು ನಿಧಾನವಾಗಿ, ಮೃದುವಾಗಿ ಎರಡೂ ಅಂಗೈ ಉಜ್ಜಿ ಹಣೆಯನ್ನು ಮಾಲೀಷ್ ಮಾಡಬೇಕು.<br>– ಮುಖದ ಮಾಲಿಷ್ ಮಾಡಬೇಕು.<br>– ಕಣ್ಣುಗಳಿಗೆ ವ್ಯಾಯಾಮ ಹೊರಳಿಸುವುದು.<br>– ಮಿಟುಕಿಸುವುದು ಅಂಗೈಗೆ ಶಾಖ ಕೊಡುವುದು ಇತ್ಯಾದಿ ಚಟುವಟಿಕೆಗಳನ್ನು ಮಾಡಿಸುವುದು. | | | | | |
| | 25 ನಿ | | | | ಶಿಕ್ಷಕ | * ವೃಕ್ಷಾಸನ ಅಭ್ಯಾಸ ಮಾಡುವುದನ್ನು ಶಿಕ್ಷಕರು ಮೊದಲು ಮಾಡಿ ತೋರಿಸಿ ನಂತರ ಮಕ್ಕಳಿಂದ ಮಾಡಿಸುವುದು.<br>– ಮೊದಲು ಸಮಸ್ಥಿತಿಯಲ್ಲಿ ನಿಲ್ಲಬೇಕು.<br>– ಬಲಗಾಲನ್ನು ಮಡಚಿ ಮೇಲತ್ತುತ್ತಾ ಬಲಪಾದವನ್ನು ಎಡ ತೊಡೆಯ ಮೇಲಕ್ಕೆ ತಂದು ಸೇರಿಸಿ ಬೆರಳುಗಳು ನೆಲಕ್ಕೆ ಮುಖವಾಗಿರಲಿ<br>– ಶ್ವಾಸ ತೆಗೆದುಕೊಳ್ಳುತ್ತ ಎರಡೂ ಕೈಗಳನ್ನು ನಮಸ್ಕಾರ ಸ್ಥಿತಿಗೆ ತಂದು ನಿಧಾನವಾಗಿ ಮೇಲೆತ್ತಿ ತೋಳುಗಳು ಕಿವಿಗೆ ತಾಗಿರಲಿ, ಶ್ವಾಸ ತೆಗೆದುಕೊಂಡು ಎರಡೂ ಕೈಗಳನ್ನು ಮೇಲಕ್ಕೆ ಜಗ್ಗೋಣ.<br>– ಈ ಸ್ಥಿತಿಯಲ್ಲಿ ಸಹಜ ಉಸಿರಾಟ ನಡೆಸೋಣ<br>– ಶ್ವಾಸಬಿಡುತ್ತಾ ಕೈಯನ್ನು ನಿಧಾನವಾಗಿ ಕೆಳಗೆ ಇಳಿಸಿ<br>– ಎಡಗಾಲನ್ನು ನೇರವಾಡಿ ಸಮಸ್ಥಿತಿಗೆ ಬನ್ನಿ<br>– ವಿಶ್ರಾಂತಿ ಪಡೆಯೋಣ ಎಂದು ವಿವರಿಸುತ್ತಾ ಇದರಿಂದಾಗುವ ಲಾಭಗಳನ್ನು ವಿವರಿಸುವುದು<br>– 1) ಸ್ಮರಣ ಶಕ್ತಿ, ಏಕಾಗ್ರತೆಯ ವರ್ಧನೆಗೆ ಸಹಕಾರಿ<br>2) ತೊಡೆಯ ಮಾಂಸಖಂಡಗಳ ಶಕ್ತಿವೃದ್ಧಿಸುವುದು. | | | | | |

ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ 'ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು'.

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಎರಡನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| **14** ಮೊದಲ 40 ನಿ | 10 ನಿ | ಸಾ. ಉ. ಉ. ಕಾರ್ಯ<br>ಬಣ್ಣದ ಹಾಳೆಗಳಿಂದ ವಿವಿಧ ಆಕೃತಿ ತಯಾರಿಕೆ | * ಬಣ್ಣದ ಹಾಳೆಗಳನ್ನು ಬಳಸಿ ವಿವಿಧ ವಸ್ತು / ಆಕೃತಿಗಳನ್ನು ತಯಾರಿಸುವ ಸಾಮರ್ಥ್ಯ. | ಚೌಕಾಕಾರದ ಬಣ್ಣ ಹಾಳೆ ಸ್ಕೆಚ್‌ಪೆನ್ | ಶಿಕ್ಷಕ | ಎಲ್ಲಾ ಮಕ್ಕಳನ್ನು ವ್ಯವಸ್ಥಿತವಾಗಿ ಕುಳ್ಳಿರಿಸಿ, ಅವರಿಗೆ ಬಣ್ಣದ ಹಾಳೆಗಳು ಹಾಗೂ ಸ್ಕೆಚ್ ಪೆನ್ನುಗಳನ್ನು ವಿತರಿಸುವರು. | ಒಂದನೇ ತರಗತಿಯ ಮಕ್ಕಳೊಂದಿಗೆ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. | | | | |
| | 20 ನಿ | | | | ಶಿಕ್ಷಕ | ಶಿಕ್ಷಕರು ಮಕ್ಕಳಿಗೆ ಅಗತ್ಯ ಸೂಚನೆಗಳನ್ನು ನೀಡುತ್ತಾ, ಮಾದರಿಯಾಗಿ ಮಾಡಿ ತೋರಿಸುವರು. ಮಕ್ಕಳಿಗೆ ಕೊಟ್ಟಿರುವ ಹಾಳೆಯನ್ನು ಮಡಿಸಿ, ನಾಯಿಯನ್ನು ಮಾಡುವಂತೆ ಸೂಚಿಸುವರು.<br>1 2 3 4<br><br>ನಂತರ ಬಂದಿರುವ ಆಕೃತಿಗೆ ಕಣ್ಣು ಬರೆದು ನಾಯಿಯನ್ನು ಮಾಡುವಂತೆ ಶಿಕ್ಷಕರು ಸೂಚನೆ ನೀಡುವರು.<br> | | | | | |
| | 10 ನಿ | | | | ಶಿಕ್ಷಕ | ಕೊನೆಯಲ್ಲಿ ಶಿಕ್ಷಕರು ಮಕ್ಕಳು ಮಾಡಿರುವ ಎಲ್ಲಾ ಆಕೃತಿಗಳನ್ನು ತರಗತಿಯ ಒಂದು ಭಾಗದಲ್ಲಿಟ್ಟು ಪ್ರದರ್ಶನ ಏರ್ಪಡಿಸುವರು. ಎಲ್ಲಾ ಮಕ್ಕಳನ್ನು ಪ್ರಶಂಸಿಸುವರು. | | | | | |
| **4** ಕೊನೆಯ 40 ನಿ | 10 ನಿ | ಮೌಲ್ಯ ಶಿಕ್ಷಣ<br>ಸ್ನೇಹ | * ಮಕ್ಕಳು ಪ್ರಾಣಿಗಳು, ಓರಗೆಯವರು ಹಾಗೂ ಕಿರಿಯರಲ್ಲಿ ಸ್ನೇಹ ಪ್ರೀತಿಯನ್ನು ತೋರಿಸುವ ಗುಣಬೆಳೆಸಿಕೊಳ್ಳುವುದು. | ಪ್ರಾಣಿಗಳ ನಡುವೆ ಸ್ನೇಹ ಸೂಚಿಸುವ ಚಿತ್ರಗಳು<br>ಹಿಪ್ಪೋಕ್ಲೀಸ್‌ನ ಕಥೆಯ ಚಿತ್ರಪಟಗಳು | ಶಿಕ್ಷಕ | ಶಿಕ್ಷಕರು, ಎಲ್ಲಾ ಮಕ್ಕಳನ್ನು ಆಟದ ಮೈದಾನಕ್ಕೆ ಕರೆದೊಯ್ದು ಅವರನ್ನು ವೃತ್ತಾಕಾರವಾಗಿ ಕುಳಿತುಕೊಳ್ಳಲು ಸೂಚಿಸುವರು. ನಂತರ, ತಮಗೆ ಇಷ್ಟವಾದ ಸ್ನೇಹಿತರ ಹೆಸರು ಹೇಳುವಂತೆ ಸೂಚಿಸುವರು. | ಎರಡೂ ತರಗತಿಯ ಸಾಮರ್ಥ್ಯಗಳು ಮತ್ತು ಮೌಲ್ಯಗಳು ಸಂಪೂರ್ಣ ಸಹಸಂಬಂಧ ಹೊಂದಿರುವುದರಿಂದ ಎರಡೂ ತರಗತಿಯ ಮಕ್ಕಳು ಒಟ್ಟಿಗೆ ಒಂದೇ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. | | | | |
| | 20 ನಿ | | | | ಶಿಕ್ಷಕ | ನಂತರ ಶಿಕ್ಷಕರು, ಗ್ರೀಕ್ ಪುರಾಣದಲ್ಲಿ ಬರುವ "ಹಿಪ್ಪೋಕ್ಲೀಸ್ ಮತ್ತು ಸಿಂಹದ" ಕಥೆಯನ್ನು ಸ್ವಾರಸ್ಯಪೂರ್ಣವಾಗಿ ಹಾಗೂ ಭಾವಪೂರ್ವಕವಾಗಿ ಹೇಳುವರು.<br>ನಂತರ ಹಿಪ್ಪೋಕ್ಲೀಸ್ ಹಾಗೂ ಸಿಂಹದ ನಡುವಿನ ಸ್ನೇಹವನ್ನು ವಿಶ್ಲೇಷಿಸಿ ವಿವರಿಸುವರು. | | | | | |
| | 10 ನಿ | | | | ಶಿಕ್ಷಕ | ಶಿಕ್ಷಕರು ಕೊನೆಯಲ್ಲಿ ಮಕ್ಕಳಿಗೆ ತಿಳಿದ ಯಾವುದಾದರೂ ಕಥೆಗಳನ್ನು ಮಕ್ಕಳಿಂದಲೇ ಹೇಳಿಸುವರು. | | | | | |

ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ 'ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು'.

| ಅವಧಿ | ಸಮಯ ನಿಮಿಷ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ಕಲಿಕಾಂಶ ಸಾಮರ್ಥ್ಯ | ಕಲಿಕಾ ಫಲ | ಕಲಿಕೋಪಕರಣಗಳು | ಜವಾಬ್ದಾರಿ | ಕಲಿಕಾ ಪ್ರಕ್ರಿಯೆ | ಕಲಿಕಾಂಶ ಸಾಮರ್ಥ್ಯ | ಕಲಿಕಾ ಫಲ | ಕಲಿಕೋಪಕರಣಗಳು | ಜವಾಬ್ದಾರಿ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1 KAN 71½ | 05 ನಿ | * ಓದು ಬರಹ ಅಕ್ಷರ ಕಲಿ ಕನ್ನಡ ಕಲಿಕಾ – 6 (ಒ, ಓ, ಔ, ಅಂ) | * ಪದಮಾಲೆಯ ಸರಳ ಅಕ್ಷರಗಳನ್ನು ಒತ್ತಕ್ಷರ ಮತ್ತು ಬಿಡಿಯಾಗಿ ಗುರುತಿಸುವರು. * ಅಕ್ಷರ ಪದ್ಯ ಅಕ್ಷರಗಳನ್ನು ಕಟ್ಟು ಕಲಿಗೆಯ ಹಾಗೂ ಮಂಡಿಸುತ್ತಗಳ ಮೇಳಿ ಬರೆದು ಕೃ ಬರೆಗಳನ್ನು ಓದುವರು. | ಪಠ್ಯ ಪುಸ್ತಕ | ಶಿಕ್ಷಕ | ಹಿಂದಿನ ಅವಧಿಯಲ್ಲಿ ನೀಡಲಾಗಿದ್ದ ಕೆಲಸದ ಬಗ್ಗೆ ಪರಿಶೀಲಿಸುವರು. | ಕನ್ನಡ ಗಡಿಯಾರ | ಘಟನೆಯನ್ನು ಬರೆ ಸಮಯವನ್ನು ಗುರುತಿಸುವರು. | ಪಠ್ಯ ಪುಸ್ತಕ | ಶಿಕ್ಷಕ | ಮಕ್ಕಳಿಗೆ ನೀಡಲಾಗಿದ್ದ ಗೃಹಪಾಠವನ್ನು ಪರಿಶೀಲಿಸುವರು. |
| | 35 ನಿ | | | | ಶಿಕ್ಷಕ | ಪಠ್ಯಪುಸ್ತಕ ಪುಟ 54ರ 'ಆ, ಇ, ಈ' ಈ ಚಟುವಟಿಕೆಗಳನ್ನು ಸೂಕ್ತ ಪಾಠೋಪಕರಣಗಳನ್ನು ಬಳಸಿ ಹೇಳಿಸುವರು.<br>* ಹೇಳಿಸಲಾದ ಉತ್ತರಗಳನ್ನು ಪುನರಾವರ್ತಿಸುತ್ತಾ ವೈಯಕ್ತಿಕ ಗಮನ ಕೊಟ್ಟು ಅಭ್ಯಾಸದ ಹಾಳೆಗಳನ್ನು ಭರ್ತಿ ಮಾಡಿಸುವರು. | | | | ಶಿಕ್ಷಕ | * ಹಿಂದಿನ ತರಗತಿಯಲ್ಲಿ ಪೂರ್ಣಗೊಳಿಸಲಾದ ಅಭ್ಯಾಸದ ಹಾಳೆಗಳಲ್ಲಿನ ಪ್ರಶ್ನೋತ್ತರಗಳನ್ನು ಓದಿಕೊಳ್ಳಲು ತಿಳಿಸುವರು. |
| | 05 ನಿ | | | | ಶಿಕ್ಷಕ | ಮೇಲೆ ಪೂರೈಸಲಾದ ಚಟುವಟಿಕೆಗಳನ್ನು ನೋಟ್ ಪುಸ್ತಕದಲ್ಲಿ ನಕಲು ಮಾಡಲು ತಿಳಿಸುವರು. | | | | ಶಿಕ್ಷಕ | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. |
| | 35 ನಿ | | | | | ಮೇಲಿನ ಚಟುವಟಿಕೆಯಲ್ಲಿ ತೊಡಗುವರು.<br>ಮೇಲಿನ ಚಟುವಟಿಕೆ ಪರಿಶೀಲಿಸಿ ಗೃಹಪಾಠ ನೀಡುವರು. | | | ಪಠ್ಯ ಪುಸ್ತಕ | ಶಿಕ್ಷಕ | ಪಠ್ಯಪುಸ್ತಕ ಪುಟ 7 ಮತ್ತು 8ರ 'ಇ' ಯ ಅಭ್ಯಾಸ ಚಟುವಟಿಕೆಯ ಹಾಗೂ ಭಾಷಾಭ್ಯಾಸ ಮತ್ತು ಭಾಷಾ ಚಟುವಟಿಕೆಗಳನ್ನು ಸೂಕ್ತ ಪಾಠೋಪಕರಣಗಳನ್ನು ಬಳಸಿ ಅಭ್ಯಾಸ ಮಾಡಿಸುವರು.<br>* ವಿದ್ಯಾರ್ಥಿಗಳಿಂದ ಹೇಳಿಸುವುದು ಹಾಗೂ ಭರ್ತಿ ಮಾಡಿಸುವರು.<br>ಮೇಲಿನ ಚಟುವಟಿಕೆಯ ನಂತರ ಗೃಹಪಾಠ ನೀಡುವರು. |

ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ 'ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು'.

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಎರಡನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 2 | 10 ನಿ | **ಗಣಿತ**<br>**ವ್ಯವಕಲನ** | * ಚಿತ್ರಗಳು ಮತ್ತು ವಸ್ತುಗಳ ಸಹಾಯದಿಂದ 1 ರಿಂದ 9ರ ವರೆಗಿನ ಸಂಖ್ಯೆಗಳನ್ನು ಬಳಸಿ ವ್ಯವಕಲನ ಮಾಡುವುದು.<br>* '–' ಚಿಹ್ನೆಯ ಪರಿಚಯ ಮತ್ತು ಚಿಹ್ನೆ ಬಳಸಿ ವ್ಯವಕಲನ ಮಾಡುವುದು. | 1 ರಿಂದ 9ರವರೆಗಿನ ಸಂಖ್ಯೆಗಳಿಗೆ ಸಂಬಂಧಿಸಿದ ವ್ಯವಕಲನದ ಲೆಕ್ಕಗಳನ್ನು ಒಳಗೊಂಡ ಮಿಂಚು ಪಟ್ಟಿಗಳು ($^1/_{32}$ ಸೈಜ್) | ಶಿಕ್ಷಕ | ಎರಡೂ ತರಗತಿಯಲ್ಲಿನ ವ್ಯವಕಲನಕ್ಕೆ ಸಂಬಂಧಿಸಿದ ಸಾಮರ್ಥ್ಯಗಳಿಗೆ ಅನುಗುಣವಾಗಿ [ಲೆಕ್ಕಗಳನ್ನು ಚಿಕ್ಕ-ಚಿಕ್ಕ ಮಿಂಚುಪಟ್ಟಿಗಳ [1/32] ಮೇಲೆ ಬರೆದು, ಅವುಗಳನ್ನು ತರಗತಿವಾರು ಪ್ರತ್ಯೇಕ ಡಬ್ಬಿಗಳಲ್ಲಿ ಹಾಕಿಟ್ಟುಕೊಂಡಿರುವುದನ್ನು ತರಗತಿಗೆ ತಂದು ಸೂಕ್ತ ತಯಾರಿ ಮಾಡಿಕೊಳ್ಳುವರು.] | **ಗಣಿತ**<br>**ವ್ಯವಕಲನ** (ದಶಕ ರಹಿತ ಮತ್ತು ದಶಕ ಸಹಿತ) | * ಎರಡು ಸಂಖ್ಯೆಗಳ ದಶಕ ರಹಿತ ಮತ್ತು ದಶಕ ಸಹಿತ ವ್ಯವಕಲನ ಮಾಡುವುದು.<br>* ನಿತ್ಯ ಜೀವನಕ್ಕೆ ಸಂಬಂಧಿಸಿದಂತೆ ವ್ಯವಕಲನದ ಸಮಸ್ಯೆಗಳನ್ನು ಪರಿಹರಿಸುವುದು. | ವ್ಯವಕಲನದ ಎಲ್ಲಾ ಮಾದರಿಯ ಲೆಕ್ಕಗಳನ್ನು ಒಳಗೊಂಡ ಮಿಂಚು ಪಟ್ಟಿಗಳು [$^1/_{32}$ ಸೈಜ್] | | ಒಂದನೇ ತರಗತಿಯ ಮಕ್ಕಳೊಂದಿಗೆ ಸೇರಿ ಅಭ್ಯಾಸ ಮತ್ತು ಬಳಕೆಯ ಚಟುವಟಿಕೆಯಲ್ಲಿ ತೊಡಗುವರು. [ಪಠ್ಯಪುಸ್ತಕದ ಪುಟ 102, 103 ಮತ್ತು 104ರಲ್ಲಿನ ಲೆಕ್ಕಗಳನ್ನು ಕಾರ್ಡ್‌ಗಳಲ್ಲಿ ಬರೆಯುವುದು] |
| | 60 ನಿ | | | | ಶಿಕ್ಷಕ | ಎರಡೂ ತರಗತಿಯ ಮಕ್ಕಳನ್ನು ಒಂದೇ ವೃತ್ತದಲ್ಲಿ ಕೂರಿಸಿ ಪ್ರತಿಬಾರಿ ಒಬ್ಬ ವಿದ್ಯಾರ್ಥಿಯನ್ನು ಕರೆದು, ತನ್ನ ತರಗತಿಯ ಡಬ್ಬಿಯಿಂದ ಒಂದು ಮಿಂಚುಪಟ್ಟಿ ತೆಗೆಯಲು ಹೇಳುವುದು. ತಮಗೆ ಬಂದ ಲೆಕ್ಕಗಳನ್ನು ಕಪ್ಪು ಹಲಗೆಯ ಮೇಲೆ ಮಾಡಲು ಹೇಳುವರು. ಉತ್ತರ ಸರಿ ಇದ್ದರೆ, ಅವನ ತರಗತಿಗೆ ಒಂದು ಅಂಕ ನೀಡುವರು.<br>ಹೀಗೆ ಎಲ್ಲಾ ವಿದ್ಯಾರ್ಥಿಗಳಿಂದ ಲೆಕ್ಕ ಮಾಡಿಸಿ, ಕೊನೆಯಲ್ಲಿ ಯಾವ ತರಗತಿಗೆ ಹೆಚ್ಚು ಅಂಕ ಲಭಿಸಿದೆ ಎಂಬುದನ್ನು ಪರಿಶೀಲಿಸುವರು. | | | | | |
| | 10 ನಿ | | | | ಶಿಕ್ಷಕ | ಹೆಚ್ಚಿಗೆ ಅಂಕ ಪಡೆದ ತರಗತಿಯನ್ನು ಅಭಿನಂದಿಸಿ, ಲೆಕ್ಕಗಳನ್ನು ತಪ್ಪಾಗಿ ಮಾಡಿದ ವಿದ್ಯಾರ್ಥಿಗಳನ್ನು ಗುರುತಿಸಿ, ಅವರತ್ತ ಹೆಚ್ಚಿನ ಗಮನ ಕೊಡುವರು. | | | | | |

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಎರಡನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3 | 80 ನಿ | ಸಾ.ಉ.ಉ.ಕಾ.<br>ಕಸದ ಬುಟ್ಟಿ ತಯಾರಿಕೆ | * ಕಸದ ಬುಟ್ಟಿ ತಯಾರಿಸುವುದನ್ನು ತಿಳಿಯುವರು | ರಟ್ಟಿನ ಡಬ್ಬ<br>ಅಂಟು ದಾರ<br>ಡ್ರಾಯಿಂಗ್ ಶೀಟ್<br>ಸ್ಕೆಚ್‌ಪೆನ್ | ಶಿಕ್ಷಕರು | ಹಳೆಯ ರಟ್ಟಿನ ಡಬ್ಬಗಳನ್ನು ಸಂಗ್ರಹಿಸಿ ಅವುಗಳಿಗೆ ಮೇಲಿನ ಮುಚ್ಚಳವನ್ನು ತೆಗೆದುಹಾಕಿ ಒಳಭಾಗದಲ್ಲಿ ಪೇಪರ್‌ನ್ನು ಅಂಟಿಸಿ ಮೇಲ್ಭಾಗದಲ್ಲೂ ಸಹ ಅದೇ ರೀತಿಯಾಗಿ ಪೇಪರ್‌ನ್ನು ಅಂಟಿಸಿ ಎರಡು ಅಂಚುಗಳಿಗೆ ಒಂದು ದಾರವನ್ನು ಸೇರಿಸಿ ಕಟ್ಟುವುದು.<br>ಮೇಲೆ ಹೇಳಲಾದ ಸೂಚನೆಗಳಂತೆ ಶಿಕ್ಷಕರ ಸಹಕಾರದೊಂದಿಗೆ ಮಕ್ಕಳು ಕಸದ ಬುಟ್ಟಿಯನ್ನು ತಯಾರಿಸುವರು.<br>ಮಕ್ಕಳು ತಯಾರಿಸಿದ ಕಸದ ಬುಟ್ಟಿಗಳನ್ನು ತರಗತಿಯಲ್ಲಿ ಪ್ರದರ್ಶಿಸುವರು.<br>ಉತ್ತಮವಾಗಿ ತಯಾರಿಸಿದ ಮಕ್ಕಳನ್ನು ಪ್ರಶಂಸಿಸುವರು. | ಒಂದನೇ ತರಗತಿಯ ಮಕ್ಕಳೊಂದಿಗೆ ಸೇರಿ ಕಸದ ಬುಟ್ಟಿಯನ್ನು ತಯಾರಿಸುವ ಚಟುವಟಿಕೆಯಲ್ಲಿ ಭಾಗವಹಿಸುವರು. | | | | |

ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ 'ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು'.

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಎರಡನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 4<br>ಪ.ಅ.<br>44 | 10 ನಿ | ಪರಿಸರ ಅಧ್ಯಯನ<br>ವಿವಿಧ ಉಡುಪುಗಳು | ಉಡುಪಿನ ಅವಶ್ಯಕತೆ, ಉಡುಪಿನ ವಿವಿಧತೆಯನ್ನು ಗುರುತಿಸುವುದು. | ಪಠ್ಯ ಪುಸ್ತಕದಲ್ಲಿನ ಅಭ್ಯಾಸಗಳು | | ಎರಡೂ ತರಗತಿಯ ಮಕ್ಕಳಿಗೆ ಒಂದು ಅಭಿನಯ ಗೀತೆ ಹೇಳಿಕೊಡುವರು. | ಹೊರ ಸಂಚಾರ<br>ಪರಿಸರ ಅಧ್ಯಯನ | * ಪ್ರಕೃತಿ ಸೌಂದರ್ಯವನ್ನು ಮೆಚ್ಚುವರು ಬೇರೆ ಬೇರೆ ಪ್ರಾಣಿಗಳ ಮನೆಗಳನ್ನು ಗುರುತಿಸುವರು. | ಪಠ್ಯ ಪುಸ್ತಕದ ಅಭ್ಯಾಸದ ಹಾಳೆಗಳು | ಶಿಕ್ಷಕ | 1ನೇ ತರಗತಿಯ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು.<br>ಹಿಂದಿನ ತರಗತಿಗೆ ಸಂಬಂಧಿಸಿದಂತೆ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವಂತೆ ಹಿರೇಮಣಿಗೆ ಸೂಚಿಸುವರು. |
| | 30 ನಿ | | | | ಶಿಕ್ಷಕ | **ಮೌಲ್ಯಮಾಪನ ಹಂತ :**<br>* ಕಲಿಕಾಂಶ ಚಟುವಟಿಕೆಯಲ್ಲಿ ಬಳಸಲಾದ ಪಾಠೋಪಕರಣಗಳನ್ನು ಉಪಯೋಗಿಸಿಕೊಂಡು ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವರು.<br>* ತಿಳಿ–ಕಲಿ ವಿಭಾಗದ 'ಅ' ಪ್ರಶ್ನೆಗಳಿಗೆ ಗುಂಪಿನಲ್ಲಿ ಹಾಗೂ ವೈಯಕ್ತಿಕವಾಗಿ ಉತ್ತರಗಳನ್ನು ಪಡೆಯುವರು. | | | | | ಮೇಲಿನ ಚಟುವಟಿಕೆಯಲ್ಲಿ ತೊಡಗುವರು. |
| | 05 ನಿ | | | | ಶಿಕ್ಷಕ | ಹಿರೇಮಣಿಯ ನೇತೃತ್ವದಲ್ಲಿ ಮೌಲ್ಯಮಾಪನ ಪ್ರಕ್ರಿಯೆ ಮುಂದುವರೆಸುವಂತೆ ಸೂಚಿಸುವರು. | | | | ಶಿಕ್ಷಕ | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. |
| | 35 ನಿ | | | | ಹಿರೇಮಣಿ | ಮೇಲಿನ ಚಟುವಟಿಕೆಯಲ್ಲಿ ತೊಡಗುವರು. | | | | ಶಿಕ್ಷಕ | ಪುಟಸಂಖ್ಯೆ 18ರಲ್ಲಿನ 'ಉ' ಚಟುವಟಿಕೆಯನ್ನು ಕೇಳುತ್ತಾ ಮಾಡಿಸುವರು.<br>* ಪ್ರಾಣಿಗಳು ಮತ್ತು ಅವುಗಳ ವಾಸಸ್ಥಳದ ಚಾರ್ಟ್‌ಗಳನ್ನು ಬಳಸಿ ಮೌಲ್ಯಮಾಪನ ಮಾಡುವರು.<br>* ಕಲಿಕಾಂಶ ಹಂತಕ್ಕೆ ಸಂಬಂಧಿಸಿದಂತೆ ಪ್ರಶ್ನೆಗಳಿಗೆ ಉತ್ತರ ಪಡೆಯುವರು.<br>ಮುಂದಿನ ಅವಧಿಗೆ ಮನೆಯಿಂದ ಬರುವಾಗ ರಟ್ಟು, ಹುಲ್ಲು, ಜೇಡಿಮಣ್ಣು, ಕಡ್ಡಿ, ಹತ್ತಿ ಇತ್ಯಾದಿ ವಸ್ತುಗಳನ್ನು ತರಲು ಸೂಚಿಸುವರು. |

ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ 'ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು'.

| | | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1 ಮೊದಲ 40ನಿ | 40ನಿ | ಜೀವನ ವಿಜ್ಞಾನ ದೈಹಿಕ ಶಿಕ್ಷಣ | ಸಾಮೂಹಿಕ ವ್ಯಾಯಾಮ ಕಲಿಸುವುದು | ಅಗತ್ಯ ವ್ಯಾಯಾಮ ಸಲಕರಣೆಗಳು | ಶಿಕ್ಷಕ | 1 ಮತ್ತು 2ನೇ ತರಗತಿಗಳಿಗೆ ಸಾಮೂಹಿಕ ಕವಾಯಿತು ಮಾಡಿಸುವುದು. | | | | | |
| 2 KAN 12½ | 05 ನಿ | ಕನ್ನಡ * ಪದ ಓದು ಅಕ್ಷರ ಕಲಿ ಹಂತ – 6 (ಓ, ಔ, ಹ, ಶ) | * ವರ್ಣಮಾಲೆಯ ಸರಳ ಅಕ್ಷರಗಳನ್ನು ಒಟ್ಟಾಗಿ ಮತ್ತು ಬಿಡಿಯಾಗಿ ಗುರುತಿಸುವುದು. ಅಚ್ಚಾದ ದಪ್ಪ ಅಕ್ಷರಗಳನ್ನು ಕಪ್ಪು ಹಲಗೆ ಹಾಗೂ ಮಿಂಚುಪಟ್ಟಿಗಳ ಮೇಲೆ ಬರೆದ ಕೈ ಬರಹಗಳನ್ನು ಓದುವುದು. | | ಶಿಕ್ಷಕ | ಹಿಂದಿನ ಅವಧಿಯಲ್ಲಿ ನೀಡಲಾಗಿರುವ ಗೃಹಪಾಠವನ್ನು ಪರಿಶೀಲಿಸುವರು. | ಕನ್ನಡ ಗಡಿಯಾರ | ಭಾಷೆಯಲ್ಲಿನ ಎಲ್ಲಾ ಸ್ವರಗಳನ್ನು ಉಚ್ಚರಿಸುವುದು. | ನೋಟ್ ಪುಸ್ತಕ | ಶಿಕ್ಷಕ | ಹಿಂದಿನ ಅವಧಿಯಲ್ಲಿ ನೀಡಲಾಗಿರುವ ಗೃಹಪಾಠ ಪರಿಶೀಲಿಸುವರು. ಹಿರೇಮಣಿಯು ಅಭ್ಯಾಸದ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯಲು ಸೂಚಿಸುವರು. |
| | 40 ನಿ | | | ಮಿಂಚು ಪಟ್ಟಿಗಳು | ಶಿಕ್ಷಕ | **ಮೌಲ್ಯಮಾಪನ ಹಂತ :** * ಹಂತ 5 ಮತ್ತು 6ಕ್ಕೆ ಸಂಬಂಧಿಸಿದಂತೆ 1/64 ಅಳತೆಯ ಅಕ್ಷರ ಮಿಂಚುಪಟ್ಟಿಗಳನ್ನು ಮಕ್ಕಳ ಎದುರು ಇಟ್ಟು ಸೂಚಿಸಿದ ಅಕ್ಷರವನ್ನು ತೆಗೆದುಕೊಡಲು ಕೇಳುವರು. * ಸೂಕ್ತ ಅಕ್ಷರಗಳನ್ನು ಮಿಂಚುಪಟ್ಟಿಯನ್ನು ಆಯ್ದುಕೊಂಡು ಕೇಳಿದ ಪದವನ್ನು ರಚಿಸಲು ನೀಡುವರು. * ಹೇಳಿದ ಸರಳ ಪದಗಳಲ್ಲಿ ಕಪ್ಪು ಹಲಗೆಯ ಮೇಲೆ ಬರೆಸುವರು. * ಚಿತ್ರಗಳನ್ನು ತೋರಿಸಿ ಪದ ಹೇಳಿಸುವರು. | | | | ಹಿರೇಮಣಿ | ಮೇಲಿನ ಚಟುವಟಿಕೆಯಲ್ಲಿ ಭಾಗವಹಿಸುವರು. |
| | 35 ನಿ | | | ಅಕ್ಷರಗಳ ಮಿಂಚು ಪಟ್ಟಿಗಳು | ಹಿರೇಮಣಿ | ಹಿರೇಮಣಿಯು ತೋರಿಸಿದ ಅಕ್ಷರವನ್ನು ವಿದ್ಯಾರ್ಥಿಗಳ ಒಬ್ಬೊಬ್ಬರಾಗಿ ಉಚ್ಚರಿಸಲು ತಿಳಿಸುವರು. ಮೇಲಿನ ಚಟುವಟಿಕೆಯಲ್ಲಿ ಭಾಗವಹಿಸುವರು. | | | ಪಠ್ಯಪುಸ್ತಕದ ಅಭ್ಯಾಸಗಳು ಇತರೆ ಚಿತ್ರಗಳು | ಶಿಕ್ಷಕ | * ಹ್ರಸ್ವ, ದೀರ್ಘ, ಅಲ್ಪಪ್ರಾಣ, ಮಹಾಪ್ರಾಣ ಮತ್ತು ಅನುನಾಸಿಕ ಅಕ್ಷರಗಳ ಉಚ್ಚಾರವನ್ನು ಪರೀಕ್ಷಿಸುವರು. * ವರ್ಣ ಮಾಲೆಯ ಅಕ್ಷರಗಳ ಉಚ್ಚಾರದ ವ್ಯತ್ಯಾಸ ಸ್ಪಷ್ಟವಾಗಿ ಗೊತ್ತಾಗುವಂತೆ ಉಚ್ಚಾರ ಮಾಡಿಸುವರು. * ವಿವಿಧ ಸಮಯ ತೋರಿಸುವ ಗಡಿಯಾರದ ಚಿತ್ರಗಳನ್ನು ತೋರಿಸಿ ಸಮಯ ಹೇಳಿಸುವರು. |

ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ 'ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು'.

| | | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3 | 10 ನಿ | ಸಾ.ಉ.ಉ. ಕಾರ್ಯ<br>ಹಲ್ಲು ಪುಡಿ ತಯಾರಿಕೆ | ಮಕ್ಕಳು ವೈಯಕ್ತಿಕ ಸ್ವಚ್ಛತೆ ಹಾಗೂ ಹಲ್ಲುಪುಡಿ ತಯಾರಿಕೆಯ ವಿಧಾನವನ್ನು ಅರಿಯುವರು. | ಇದ್ದಿಲು, ಉಪ್ಪು, ದಾಲ್ಚಿನ್ನಿ | ಶಿಕ್ಷಕ | ಮಕ್ಕಳನ್ನು ತರಗತಿ ಕೋಣೆಯಲ್ಲಿ ಎರಡೂ ತರಗತಿಗಳನ್ನು ಒಟ್ಟಾಗಿ ಕೂರಿಸಿಕೊಂಡು ಸಾಮೂಹಿಕವಾಗಿ ಒಟ್ಟಾಗಿ ಕೂರಿಸಿಕೊಂಡು ಸಾಮೂಹಿಕವಾಗಿ ಒಂದು ಅಭಿನಯ ಗೀತೆಯನ್ನು ಹೇಳಿ ಕೊಡುವರು. | 1 ಮತ್ತು 2ನೇ ತರಗತಿಗೂ ಒಟ್ಟಾಗಿ ಸಾ.ಉ.ಉ.ಕಾ. ತರಗತಿಯನ್ನು ನಿರ್ವಹಿಸುವರು. | | | | |
| | 10 ನಿ | | | | ಶಿಕ್ಷಕ | ಮಕ್ಕಳು ಸಂಗ್ರಹಿಸಿ ತಂದಿರುವ ಇದ್ದಿಲು, ದಾಲ್ಚಿನ್ನಿ ಚಕ್ಕೆಯನ್ನು ಸೂಕ್ತ ವಸ್ತುವಿನಿಂದ (ಕಲ್ಲು / ಇತರೆ) ಕೈಗೆ ಪೆಟ್ಟಾಗದಂತೆ ಪುಡಿ ಮಾಡಿಕೊಳ್ಳಲು ಸೂಚನೆ ನೀಡುವರು. | | | | | |
| | 50 ನಿ | | | | ಶಿಕ್ಷಕರು | * ಮಕ್ಕಳು ಸೂಚನೆಯಂತೆ ಬಿಡಿಬಿಡಿಯಾಗಿ ಕುಳಿತುಕೊಂಡು ಅವರು ತಂದಿರುವ ಇದ್ದಿಲು ಮತ್ತು ದಾಲ್ಚಿನ್ನಿ ಚಕ್ಕೆಯನ್ನು ಪುಡಿ ಮಾಡಿಕೊಳ್ಳುವರು. ಇದರ ಬಗ್ಗೆ ಶಿಕ್ಷಕರು ಅಗತ್ಯ ಮಾರ್ಗದರ್ಶನ ನೀಡುತ್ತಿರಬೇಕು.<br>* ನಂತರ ಇದ್ದಿಲು ಮತ್ತು ದಾಲ್ಚಿನ್ನಿ ಪುಡಿಯನ್ನು ಸೂಕ್ತವಾದ ವಸ್ತುವಿನ (ಸಣ್ಣ ಜಾಲರಿ) ಸಹಾಯದಿಂದ ಸಣ್ಣ ಸಣ್ಣ ಕಣ ಹಾಗೂ ದಪ್ಪ ಕಣ ಬೇರ್ಪಡಿಸಬೇಕು ಎಂದು ತಿಳಿಸುವರು.<br>* ನಂತರ ಅಗತ್ಯಕ್ಕೆ ತಕ್ಕಂತೆ ಸ್ವಲ್ಪ ಪ್ರಮಾಣದಲ್ಲಿ ಉಪ್ಪನ್ನು ಬೆರೆಸಲು ತಿಳಿಸುವರು. | | | | | |
| | 10 ನಿ | | | | ಮಕ್ಕಳು | ನಂತರ ಮಕ್ಕಳು ತಯಾರಿಸಿರುವ ಇದ್ದಲುಪುಡಿಯನ್ನು ಮಕ್ಕಳು ತಂದಿರುವ ಡಬ್ಬದಲ್ಲಿ ಸಂಗ್ರಹಿಸಲು ತಿಳಿಸುವರು. | | | | | |

| ಅವಧಿ | ನಿಗದಿತ ಸಮಯ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಘಟಕದ ಹೆಸರು | ಕಲಿಕಾ ಸಾಮರ್ಥ್ಯ | ಬೇಕಾಗುವ ಕಲಿಕೋಪಕರಣಗಳು | ನಿರ್ವಾಹಕರು | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಘಟಕದ ಹೆಸರು | ಕಲಿಕಾ ಸಾಮರ್ಥ್ಯ | ಬೇಕಾಗುವ ಕಲಿಕೋಪಕರಣಗಳು | ನಿರ್ವಾಹಕರು | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1 | 80 ನಿ | ಕನ್ನಡ<br>ಮರು ಓದು ಕಥೆ<br>ಘಟಕ – 6 (ಪ್ರ, ಪಾ, ಅ) | | | ಶಿಕ್ಷಕ | ಹಿಂದಿನ ತರಗತಿಯ ಚಟುವಟಿಕೆಗಳನ್ನು ಆಧರಿಸಿ, ಮೌಲ್ಯಮಾಪನ ಮಾಡುವರು. | ಕನ್ನಡ<br>ಗಡಿಯಾರ | * ಚಟುವಟಿಕೆ ..................<br>..............................<br>.............................. | | ಶಿಕ್ಷಕ | ಹಿಂದಿನ ದಿನದ ಚಟುವಟಿಕೆಗಳನ್ನು ಆಧರಿಸಿ ಮೌಲ್ಯಮಾಪನ ಮಾಡುವರು. |
| 2 | | ಗಣಿತ<br>ವ್ಯವಕಲನ | * ಚಿತ್ರಗಳು ಮತ್ತು ವಸ್ತುಗಳ ಸಹಾಯದಿಂದ 1 ರಿಂದ 9ರ ವರೆಗಿನ ಸಂಖ್ಯೆಗಳನ್ನು ಬಳಸಿ ವ್ಯವಕಲನ ಮಾಡುವರು. * '–' ಚಿಹ್ನೆ ಪರಿಚಯ, ಬಳಕೆ ಮತ್ತು ವ್ಯವಕಲನ ಮಾಡುವರು. | ವ್ಯವಕಲನದ ಲೆಕ್ಕಗಳನ್ನು ಒಳಗೊಂಡ ಕಾರ್ಡ್‌ಗಳು | ಶಿಕ್ಷಕ | **ಮೌಲ್ಯಮಾಪನ ಚಟುವಟಿಕೆ :**<br>**ವಿ.ಸೂ :** ಎರಡೂ ತರಗತಿಯ ಚಟುವಟಿಕೆಗಳಿಗೆ ಮತ್ತು ಸಾಮರ್ಥ್ಯಗಳಿಗೆ ಸಾಮ್ಯತೆ ಇರುವುದರಿಂದ, ಎರಡೂ ತರಗತಿಯ ಮಕ್ಕಳನ್ನು ಒಂದೆಡೆ ಸೇರಿಸಿ ಮೌಲ್ಯಮಾಪನ ಚಟುವಟಿಕೆ ಮಾಡುವರು. | ಗಣಿತ<br>ವ್ಯವಕಲನ (ದಶಕ ರಹಿತ ಮತ್ತು ದಶಕ ಸಹಿತ) | * ಎರಡು ಸಂಖ್ಯೆಗಳ ದಶಕ ರಹಿತ ಮತ್ತು ದಶಕ ಸಹಿತ ವ್ಯವಕಲನ ಮಾಡುವರು.<br>* ನಿತ್ಯಜೀವನದಲ್ಲಿ ವ್ಯವಕಲನಕ್ಕೆ ಸಂಬಂಧಿಸಿದಂತೆ ಸಮಸ್ಯೆಗಳನ್ನು ಪರಿಹರಿಸುವರು. | | | **ಮೌಲ್ಯಮಾಪನ ಚಟುವಟಿಕೆ :** |
| | 10 ನಿ | | | | | ವ್ಯವಕಲನಕ್ಕೆ ಸಂಬಂಧಿಸಿದ ಲೆಕ್ಕಗಳು ವಸ್ತುಗಳಿಗೆ ಸಂಬಂಧಿಸಿದ್ದು ಹಾಗೂ ಸಂಖ್ಯೆಗಳನ್ನೊಳಗೊಂಡ ಲೆಕ್ಕಗಳ ಹಲವಾರು ಕಾರ್ಡ್‌ಗಳನ್ನು ತಯಾರಿಸಿಕೊಳ್ಳುವರು.<br>[ಪಠ್ಯಪುಸ್ತಕದಲ್ಲಿನ ಪುಟ–70ರ ಲೆಕ್ಕಗಳನ್ನು ಒಳಗೊಂಡಂತೆ ಎಲ್ಲಾ ಮಾದರಿಯ ಲೆಕ್ಕಗಳ ಕಾರ್ಡ್ ತಯಾರಿಸುವರು]. | | | ವ್ಯವಕಲನದ ಲೆಕ್ಕಗಳನ್ನು ಒಳಗೊಂಡ ಕಾರ್ಡ್‌ಗಳು | ಶಿಕ್ಷಕ | ದಶಕ ರಹಿತ ವ್ಯವಕಲನ ಮತ್ತು ದಶಕ ಸಹಿತ ವ್ಯವಕಲನ ಮತ್ತು ನಿತ್ಯಜೀವನ ಸಮಸ್ಯೆಗಳನ್ನು ಚಿಕ್ಕ–ಚಿಕ್ಕ ಕಾರ್ಡ್‌ಗಳ ಮೇಲೆ ಬರೆದಿಟ್ಟುಕೊಳ್ಳುವರು.<br>[ಪಠ್ಯಪುಸ್ತಕದಲ್ಲಿನ ಎಲ್ಲಾ ಮಾದರಿಯ ಲೆಕ್ಕಗಳನ್ನು ಒಳಗೊಂಡಂತೆ ಹಲವು ಕಾರ್ಡ್ ತಯಾರಿಸಿಕೊಳ್ಳುವುದು] |
| | 60 ನಿ | | | | ಶಿಕ್ಷಕ | ಶಿಕ್ಷಕರು ಪ್ರತಿ ವಿದ್ಯಾರ್ಥಿಗೆ ಒಂದೊಂದು ಕಾರ್ಡ್ ವಿತರಿಸಿ, ಲೆಕ್ಕ ಮಾಡಲು ಸೂಚಿಸುವುದು ಒಬ್ಬ ವಿದ್ಯಾರ್ಥಿಯು ಒಂದು ಕಾರ್ಡ್‌ನಲ್ಲಿನ ಲೆಕ್ಕ ಮಾಡಿ ತಂದು ಶಿಕ್ಷಕರಿಗೆ ತೋರಿಸಬೇಕು. ಉತ್ತರ ಸರಿಯಿದ್ದರೆ ಅವನಿಗೆ ಇನ್ನೊಂದು ಕಾರ್ಡ್ ಕೊಡುವುದು. ಇದೇ ರೀತಿ ಯಾವ ವಿದ್ಯಾರ್ಥಿಯು ಹೆಚ್ಚು ಕಾರ್ಡ್‌ಗಳಲ್ಲಿನ ಲೆಕ್ಕಗಳಿಗೆ ಉತ್ತರ ಕಂಡುಹಿಡಿಯುವರು ಎಂದು ಸ್ಪರ್ಧೆ ಏರ್ಪಡಿಸಿ, ಮಕ್ಕಳ ಸಾಮರ್ಥ್ಯದ ಮೌಲ್ಯಮಾಪನ ಮಾಡುವರು. | | | | | ಒಂದನೇ ತರಗತಿಯ ಮಕ್ಕಳೊಂದಿಗೆ ಮೌಲ್ಯಮಾಪನ ಚಟುವಟಿಕೆಯಲ್ಲಿ ತೊಡಗುವರು |
| | 10 ನಿ | | | | ಶಿಕ್ಷಕ | ಅತಿ ಹೆಚ್ಚು ಲೆಕ್ಕಗಳನ್ನು ಮಾಡಿರುವ ವಿದ್ಯಾರ್ಥಿಯನ್ನು ಗುರುತಿಸಿ ಅಭಿನಂದಿಸುವುದು ಮತ್ತು ಚಪ್ಪಾಳೆಯ ಮೂಲಕ ಪ್ರೋತ್ಸಾಹಿಸುವರು. | | | | | |

**ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ 'ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು'.**

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಎರಡನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3 | 80 ನಿ | ಜೀವನ ವಿಜ್ಞಾನ “ಪುನರಾವರ್ತನೆ ಚಟುವಟಿಕೆ” | * ಹಿಂದಿನ ಸಾಮರ್ಥ್ಯಗಳ ಪುನರಾವರ್ತನೆ | | ಶಿಕ್ಷಕ | ಈ ಹಿಂದೆ ಕಲಿಸಲಾದ ಸಾಮರ್ಥ್ಯಗಳನ್ನಾಧರಿಸಿ ಯಾವುದಾದರೊಂದು ಅಭ್ಯಾಸಗಳನ್ನು ಪುನರಾವರ್ತನೆ ಮಾಡುವುದು.<br>ಉದಾ : ಉಸಿರಾಟದ ಅಭ್ಯಾಸಗಳು ಸರಿಯಾದ ಭಂಗಿಗಳು ಸಾಮೂಹಿಕ ಭಜನೆ ಇತ್ಯಾದಿ. | | | 1ನೇ ತರಗತಿಯೊಂದಿಗೆ ಭಾಗವಹಿಸುವರು. | | |
| 4 ಪ.ಅ. 45 | 10 ನಿ | ಪರಿಸರ ಅಧ್ಯಯನ ವಿವಿಧ ಉಡುಪುಗಳು | ಉಡುಪಿನ ಅವಶ್ಯಕತೆ ಉಡುಪಿನ ವಿವಿಧತೆಯನ್ನು ಗುರುತಿಸುವುದು. | ಅಭಿನಯ ಗೀತೆ | ಶಿಕ್ಷಕ | ಎರಡೂ ತರಗತಿಗಳ ಮಕ್ಕಳನ್ನು ಒಟ್ಟಾಗಿ ಕೂರಿಸಿಕೊಂಡು ಉಡುಪಿನ ಸ್ವಚ್ಛತೆಯ ಬಗ್ಗೆ ಹಿಮ್ಮಾಹಿತಿ ಪಡೆದುಕೊಳ್ಳುವರು ಮತ್ತು ಶಾಲಾ ಪರಿಸರದ ಹೊರಗಡೆ ಕರೆದುಕೊಂಡು ಹೋಗಲು ಸಿದ್ಧತೆ ಮಾಡಿಕೊಳ್ಳುವರು. | ಪರಿಸರ ಅಧ್ಯಯನ ಹೊರ ಸಂಚಾರ | * ಪ್ರಕೃತಿ ಸೌಂದರ್ಯವನ್ನು ಮೆಚ್ಚುವರು ಬೇರೆ ಬೇರೆ ಪ್ರಾಣಿಗಳ ಮನೆಗಳನ್ನು ಗುರುತಿಸುವರು. | ಶಾಲಾ ಪರಿಸರದಲ್ಲಿ ಸಿಗುವ ವಸ್ತುಗಳು | | 1ನೇ ತರಗತಿಯಲ್ಲಿನ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. |
| | 50 ನಿ | | | | | 2ನೇ ತರಗತಿಯಲ್ಲಿನ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವರು. | | | | ಶಿಕ್ಷಕ | ಮಕ್ಕಳನ್ನು ಶಾಲಾ ಪರಿಸರಕ್ಕೆ ಕರೆದುಕೊಂಡು ಹೋಗುವುದು. ನಂತರ ಎರಡೂ ತರಗತಿಯ ಮಕ್ಕಳಿಂದ ಸಂಗ್ರಹಿಸಿ ತಂದಿರುವ ರಟ್ಟು, ಹುಲ್ಲು, ಜೇಡಿಮಣ್ಣು, ಕಡ್ಡಿ ಹತ್ತಿ ಮುಂತಾದ ಸಾಮಗ್ರಿಗಳನ್ನು ಉಪಯೋಗಿಸಿಕೊಂಡು ಗೂಡು, ಗುಹೆ, ಮುಂತಾದವುಗಳನ್ನು ಮಾಡಿಸುವರು. |
| | 20 ನಿ | | | ಬಟ್ಟೆಗಳ ತುಣುಕು ಅಂಟಿಸಿರುವ ಚಿತ್ರಪಟ | ಶಿಕ್ಷಕ | ಈ ಹಿಂದೆ ಮಕ್ಕಳು ವಿವಿಧ ಬಟ್ಟೆಗಳ ಚೂರುಗಳನ್ನು ಅಂಟಿಸಿರುವ ಚಟುವಟಿಕೆಯಲ್ಲಿ ವಿವಿಧ ಬಟ್ಟೆಗಳನ್ನು ಧರಿಸುವ ಕಾಲಗಳನ್ನು ಮತ್ತು ಅವುಗಳ ಶುಭ್ರತೆಯನ್ನು ಕಾಪಾಡುವ ಬಗ್ಗೆ ತಿಳಿಸುವರು. | | | | ಹಿರೇಮಣಿ | ನಂತರ ಶಾಲಾ ಕೋಣೆಯೊಳಗೆ ಕರೆದುಕೊಂಡು ಬಂದು ಅವರು ತಯಾರಿಸಿದ ವಾಸಸ್ಥಳಗಳಲ್ಲಿ ವಾಸಿಸುವ ಪ್ರಾಣಿ ಪಕ್ಷಿಗಳ ಬಗ್ಗೆ ಮಕ್ಕಳಿಂದ ಪಟ್ಟಿ ಮಾಡಿಸುವಂತೆ ಹಿರೇಮಣಿಗೆ ತಿಳಿಸುವರು. |

ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ‘ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು’.